
# ನಾವು ವಿಭಿನ್ನರು



ಆಶಿಷ್ ರಾಯ್‌ಚೂರ್

ಉಚಿತವಾದ ಹಂಚಿಕೆಗಾಗಿ ಮಾತ್ರ
ಮುದ್ರಣ ಮತ್ತು ಹಂಚಿಕೆ : **ಆಲ್ ಪೀಪಲ್ಸ್ ಚರ್ಚ್ ಮತ್ತು ವರ್ಲ್ಡ್ ಔಟ್‌ರೀಚ್,** ಬೆಂಗಳೂರು
ಪ್ರಥಮ ಪ್ರತಿ : ಡಿಜಿಟಲ್ ಬಿಡುಗಡೆ ಸೆಪ್ಟೆಂಬರ್ 2020

ಕನ್ನಡಕ್ಕೆ ಭಾಷಾಂತರಿಸಿದವರು: ರವಿಕುಮಾರ್ ಎಂ.
ಮುಖಪುಟ ಮತ್ತು ವರ್ಣವಿನ್ಯಾಸ: ಕರುಣಾ ಜೆರೋಮ್, ಬೈಫೈಯ್ಡ್ ಡಿಸೈನ್ಸ್

**Contact Information:**
All Peoples Church & World Outreach,
# 319, 2nd Floor, 7th Main, HRBR Layout,
2nd Block, Kalyan Nagar, Bangalore 560 043
Karnataka, INDIA

Phone: +91-80-25452617
Email: bookrequest@apcwo.org
Website: apcwo.org

Unless otherwise indicated, all Scripture quotations are taken from the Holy Bible, New King James Version. Copyright © 1982 by Thomas Nelson, Inc., Used by permission. All rights reserved.

Scriptures marked as "(MSG)" are taken from THE MESSAGE: The Bible in Contemporary Language copyright 2002 by Eugene H. Peterson.

Scriptures marked as "(GNB)" are taken from the GNB – Second Edition © 1992 by American Bible Society. Used by permission.

**ಉಚಿತ ವಿತರಣೆಗಾಗಿ**

ಈ ಪುಸ್ತಕದ ಉಚಿತ ವಿತರಣೆಯು ಆಲ್ ಪೀಪಲ್ಸ್ ಸಭೆಯ ಸಭಿಕರು, ಸ್ನೇಹಿತರು, ಪಾಲುಗಾರರ ಹಣಕಾಸಿನ ನೆರವಿನ ಮೂಲಕ ಸಾಧ್ಯವಾಗಿದೆ. ಇಂತಹ ಉಚಿತ ಪುಸ್ತಕ ಪ್ರಕಾಶನದ ಮೂಲಕ ನೀವು ಸಮೃದ್ಧಿ ಹೊಂದಿದ್ದರೆ ಆಲ್ ಪೀಪಲ್ಸ್ ಸಭೆಯ ಪ್ರಕಾಶನಗಳ ಉಚಿತ ವಿತರಣೆ ಮತ್ತು ಮುದ್ರಣಗಳಿಗೆ ಹಣಕಾಸಿನ ಸಹಾಯ ನೀಡುವಂತೆ ನಿಮ್ಮನ್ನು ಆಹ್ವಾನಿಸುತ್ತೇವೆ. ವಂದನೆಗಳು!

**ಮೇಲಿಂಗ್ ಪಟ್ಟಿ ಮತ್ತು ಉಚಿತ ಹೆಚ್ಚುವರಿ ಪುಸ್ತಕಗಳಿಗಾಗಿ**

ಹೊಸ ಪುಸ್ತಕಗಳು ಮುದ್ರಣವಾದಾಗ ಅವುಗಳನ್ನು ಪಡೆದುಕೊಳ್ಳಲು ದಯವಿಟ್ಟು ನಿಮ್ಮ ಸರಿಯಾದ ಅಂಚೆ ವಿಳಾಸ ಮತ್ತು ಯಾವ ಭಾಷೆಗಳಲ್ಲಿ ಪುಸ್ತಕಗಳು ಬೇಕೆಂಬುದನ್ನು ನಮ್ಮೊಂದಿಗೆ ಹಂಚಿಕೊಳ್ಳಿರಿ. ನಾವು ನಿಮ್ಮ ಸಭೆಯಲ್ಲಿ, ಸತ್ಯವೇದ ಅಧ್ಯಯನ ಗುಂಪು, ಸತ್ಯವೇದ ಶಾಲೆ, ಸೆಮಿನಾರ್ ಮುಂತಾದವುಗಳಿಗಾಗಿ ಹೆಚ್ಚಿನ ಪುಸ್ತಕಗಳನ್ನು ಕಳುಹಿಸಲು ನಾವು ಸಂತೋಷವುಳ್ಳವರಾಗಿದ್ದೇವೆ. ನಿಮಗೆ ಎಷ್ಟು ಪುಸ್ತಕಗಳು ಬೇಕೆಂಬುದನ್ನು ನಮಗೆ ತಿಳಿಸಿರಿ. ನಾವು ಅವುಗಳನ್ನು ನಿಮಗೆ ಕಳುಹಿಸುತ್ತೇವೆ.

(Kannada Book - We are Different)

# ನಾವು ವಿಭಿನ್ನರು

# ಪರಿವಿಡಿ


| | | |
|---|---|---|
| 1. | ಅಂಧಕಾರದಿಂದ ಆತನ ಬೆಳಕಿಗೆ ಕರೆಯಲ್ಪಟ್ಟವರು | 1 |
| 2. | ದೇವರ ವಾಕ್ಯ ಎದುರಾಗಿ ಪ್ರಪಂಚದ ಸಂಸ್ಕೃತಿ | 7 |
| 3. | ನಾವು ವಿಭಿನ್ನವಾದವರು | 9 |

# 1

# ಅಂಧಕಾರದಿಂದ ಆತನ ಬೆಳಕಿಗೆ ಕರೆಯಲ್ಪಟ್ಟವರು

1 ಪೇತ್ರ 2:9

**ನೀವಾದರೂ ನಿಮ್ಮನ್ನು ಕತ್ತಲೆಯೊಳಗಿಂದ ಕರೆದು ತನ್ನ ಆಶ್ಚರ್ಯಕರವಾದ ಬೆಳಕಿನಲ್ಲಿ ಸೇರಿಸಿದಾತನ ಗುಣಾತಿಶಯಗಳನ್ನು ಪ್ರಚಾರ ಮಾಡುವವರಾಗುವಂತೆ ದೇವರಾದುಕೊಂಡ ಜನಾಂಗವೂ ರಾಜವಂಶಸ್ಥರಾದ ಯಜಕರ ಮಾಸಲಾದ ಜನವೂ ದೇವರ ಸ್ವಕೀಯ ಪ್ರಜೆಯು ಆಗಿದ್ದೀರಿ.**

ನಾನು ಮತ್ತು ನೀವು ದೇವರ ''ಸ್ವಂತ ವಿಶೇಷ ಜನರು'' ಆಗಿದ್ದೇವೆ. ನೀವು ಕ್ರೈಸ್ತರಾಗಿದ್ದರೆ – ಒಬ್ಬ ವಿಶ್ವಾಸಿಯಾಗಿದ್ದರೆ – ನೀವು ಅರ್ಹತೆಯುಳ್ಳವರು! ನಾವುಗಳು ಆರಿಸಿಕೊಂಡ ಜನಾಂಗವೂ, ರಾಜವಂಶಸ್ಥರೂ, ಪವಿತ್ರವಾದ ದೇಶದವರೂ, ಆತನ ಸ್ವಂತ ವಿಶೇಷವಾದ ಜನರು ಎಂಬುದಾಗಿ ಸತ್ಯವೇದವು ವಿವರಿಸುತ್ತದೆ ಯಾಕೆಂದರೆ ನಮ್ಮನ್ನು ಕತ್ತಲೆಯೊಳಗಿಂದ ಅದ್ಭುತಕರವಾದ ಬೆಳಕಿನೆಡೆಗೆ ಕರೆದಾತನ ಗುಣಾತಿಶಯಗಳನ್ನು ಮತ್ತು ಮಹತ್ತತೆಗಳನ್ನು, ಶ್ರೇಷ್ಟತೆಗಳನ್ನು ಮತ್ತು ಸ್ತೋತ್ರಗಳನ್ನು ಸಾರುವುದಕ್ಕಾಗಿ, ಘೋಷಿಸುವುದಕ್ಕಾಗಿ ಮತ್ತು ಪ್ರಕಟಿಸುವುದಕ್ಕಾಗಿಯೇ ಆಗಿದೆ. ಆದ್ದರಿಂದ ಜನರು ನಮ್ಮನ್ನು ಕ್ರೈಸ್ತರೆಂದು ನೋಡುವಾಗ ನಾವು ಎಷ್ಟು ಪ್ರವೀಣರು, ಪರಿಪೂರ್ಣರು, ಸದ್ಗುಣಶೀಲರು, ಮತ್ತು ನಾವು ಏನಾಗಬೇಕೆಂಬುದಾಗಿ ದೇವರು ಕರೆದಂತಹ ಮಹತ್ತುವುಳ್ಳವರು ಎಂಬುದಾಗಿ ಅವರು ನೋಡಬೇಕು ದೇವರನ್ನು ಉತ್ತಮವಾಗಿ ತೋರಿಸಲು ನಾನು ಮತ್ತು ನೀವುಗಳು ಈ ಭೂಲೋಕದಲ್ಲಿ ಇದ್ದೇವೆ.

''ಕತ್ತಲೆಯೊಳಗಿನಿಂದ ಬೆಳಕಿಗೆ ಕರೆಯಲ್ಪಟ್ಟಿದ್ದೇವೆ'' ಎಂಬುದಾಗಿ ಸತ್ಯವೇದವು ಹೇಳುತ್ತದೆ. ನಾವು ಒಮ್ಮೆ ಕತ್ತಲೆಯ ಪರಿಸರದಲ್ಲಿ ಜೀವಿಸುತ್ತಿದ್ದೇವು ಇದು ನಮ್ಮ ಆಲೋಚನೆಗಳ ನಡವಳಿಕೆಗಳ ಮತ್ತು ಸಂಸ್ಕೃತಿಗಳ ಪ್ರಕ್ರಿಯೆಗಳನ್ನು ರೂಪಿಸಿವೆ. ಆದರೆ ಅದರಿಂದ ದೇವರು ಹೊರಗಡೆ ತಂದಿದ್ದಾನೆ ಮತ್ತು ಬೆಳಕಿಗೆ ಕರೆತಂದಿದ್ದಾನೆ. ಈಗ ಬೆಳಕು ನಮ್ಮ ಪರಿಸರವಾಗಿದೆ ಮತ್ತು ಇದು ನಮ್ಮ ಆಲೋಚನೆಗಳು ನಡವಳಿಕೆಗಳು ಮತ್ತು ಸಂಸ್ಕೃತಿಗಳ ಪ್ರಕ್ರಿಯೆಗಳನ್ನು ರೂಪಿಸುತ್ತದೆ. ಯಾಕೆಂದರೆ ನಾವು ಬೆಳಕಾಗಿದ್ದೇವೆ. ಮತ್ತು ಕತ್ತಲೆಯ ಭಾಗಗಳಾಗಿಲ್ಲ, ನಾವು ವಿಭಿನ್ನವಾದವರು. ಆಮೆನ್!

## ಹೊಸ ಒಡಂಬಡಿಕೆಯಲ್ಲಿ ವಿವರಿಸಿದಂತೆ – ಕತ್ತಲೆ

### ಕೆಟ್ಟಕಾರ್ಯಗಳನ್ನು ಮಾಡುವವರು ಅಡಗಿಕೊಳ್ಳುವ ಸ್ಥಳ

ಯೋಹಾನ 3:19

**ಬೆಳಕು ಲೋಕಕ್ಕೆ ಬಂದಿದ್ದರೂ ಮನುಷ್ಯರ ಕೃತ್ಯಗಳು ಕೆಟ್ಟವುಗಳಾಗಿರುವುದರಿಂದ ಅವರು ಬೆಳಕಿಗಿಂತ ಕತ್ತಲೆಯನ್ನೇ ಹೆಚ್ಚಾಗಿ ಪ್ರೀತಿಸಿದರು.**

ಮನುಷ್ಯರು ಬೆಳಕಿಗಿಂತ ಕತ್ತಲೆಯನ್ನು ಪ್ರೀತಿಸಿದರು ಯಾಕೆಂದರೆ ಅವರ ಕೃತ್ಯಗಳು ಕೆಟ್ಟವವುಗಳಾಗಿದ್ದವು. ಆದ್ದರಿಂದ ಕತ್ತಲೆಯು ಅಂತಹ ಕೆಟ್ಟ ವಿಷಯಗಳನ್ನು ಮಾಡುವವರು ಅಡಗಿಕೊಳ್ಳುವ ಒಂದು ಸ್ಥಳವಾಗಿದೆ.

## ಸೈತಾನನ ಬಲ

ಅಪೊಸ್ತಲರ ಕೃತ್ಯಗಳು 26:18

**ಅವರು ಕತ್ತಲೆಯಿಂದ ಬೆಳಕಿಗೂ ಸೈತಾನನ ಅಧಿಕಾರದಿಂದ ದೇವರ ಕಡೆಗೂ ತಿರುಗಿಕೊಂಡು ನನ್ನಲ್ಲಿ ನಂಬಿಕೆಯಿಡುವುದರಿಂದ ಪಾಪ ಪರಿಹಾರವನ್ನೂ ಪವಿತ್ರರಾದವರಲ್ಲಿ ಹಕ್ಕನ್ನೂ ಹೊಂದುವಂತೆ ಅವರ ಕಣ್ಣುಗಳನ್ನು ತೆರೆಯಬೇಕೆಂದು ಅವರ ಬಳಿಗೆ ನಾನು ನಿನ್ನನ್ನು ಕಳುಹಿಸುತ್ತೇನೆ ಅಂದನು.**

''ನಾನು ಜನರನ್ನು ಕತ್ತಲೆಯಿಂದ ಬೆಳಕಿನೆಡೆಗೆ; ಸೈತಾನನ ಬಲದಿಂದ ದೇವರ ಕಡೆಗೆ ತರುತ್ತೇನೆ'' ಎಂಬುದಾಗಿ ಕರ್ತನು ಪೌಲನಿಗೆ ಹೇಳಿದನು. ಆದ್ದರಿಂದ ಕತ್ತಲೆ ಎಂಬ ಪದವು ಸೈತಾನ ಬಲವನ್ನು ವಾಸ್ತವವಾಗಿ ಸೂಚಿಸುತ್ತದೆ.

## ಆತ್ಮಿಕವಾಗಿ ಕುರುಡಾಗಿರುವವರು

ರೋಮಾಪುರದವರಿಗೆ 2:19

**ಧರ್ಮಶಾಸ್ತ್ರದಲ್ಲಿ ಜ್ಞಾನ ಸತ್ಯಗಳ ಸ್ವರೂಪವೇ ನನಗೆ ಇರುವುದರಿಂದ ಕುರುಡರಿಗೆ ದಾರಿ ತೋರಿಸುವವನೂ ಕತ್ತಲೆಯಲ್ಲಿರುವವರಿಗೆ ಬೆಳಕೂ**

## ರಕ್ಷಿಸಲ್ಪಡದವರ ಕ್ಷೇತ್ರ

2 ಕೊರಿಂಥದವರಿಗೆ 6:14, 15

**ನೀವು ಕ್ರಿಸ್ತ ನಂಬಿಕೆಯಿಲ್ಲದವರೊಂದಿಗೆ ಸೇರಿ ಇಜ್ಜೋಡಾಗ ಬೇಡಿರಿ ಧರ್ಮಕ್ಕೂ ಅಧರ್ಮಕ್ಕೂ ಜೊತೆಯೇಸು? ಬೆಳಕಿಗೂ ಕತ್ತಲೆಗೂ ಐಕ್ಯವೇನು? ಕ್ರಿಸ್ತನಿಗೂ ಸೈತಾನನಿಗೂ ಒಡನಾಟವೇನು? ನಂಬುವವನಿಗೂ ನಂಬದೆ ಇರುವವನಿಗೂ ಪಾಲುಗಾರಿಕೆ ಏನೂ?**

## ಕತ್ತಲೆಯ ದುಷ್ಟ ಆಡಳಿತಗಾರರು

ಎಫೆಸದವರಿಗೆ 6:12

**ನಾವು ಹೋರಾಡುವುದು ಮನುಷ್ಯ ಮಾತ್ರದವರ ಸಂಗಡವಲ್ಲ ರಾಜತ್ವಗಳ ಮೇಲೆಯೂ ಅಧಿಕಾರಗಳ ಮೇಲೆಯೂ ಈ ಅಂಧಕಾರದ ಲೋಕಾಧಿಪತಿಗಳ ಮೇಲೆಯೂ ಆಕಾಶಮಂಡಲದಲ್ಲಿರುವ ದುರಾತ್ಮಗಳ ಸೇನೆಯ ಮೇಲೆಯೂ ನಾವು ಹೋರಾಡುವವರಾಗಿದ್ದೇವೆ.**

ನಾವು ಕತ್ತಲೆಯ ದುರಾತ್ಮಗಳು – ಕತ್ತಲೆಯ ಅಧಿಪತಿಗಳ ವಿರುದ್ಧವಾಗಿ ಹೋರಾಡುವವರಾಗಿದ್ದೇವೆ. ಆದ್ದರಿಂದ ಮತ್ತೊಮ್ಮೆ ಕತ್ತಲೆಯು ದುರಾತ್ಮಗಳ ಕಾರ್ಯ ನಡೆಸುವ ಕ್ಷೇತ್ರವಾಗಿ ವ್ಯಾಖ್ಯಾನಿಸಲ್ಪಟ್ಟಿದೆ. ಇದು ನಿಶ್ಚಯವಾಗಿ ಉತ್ತಮವಾಗಿ ಇರುವಂತಹ ಪರಿಸರವಲ್ಲ!

## ಬೆಳಕು–ಹೊಸ ಒಡಂಬಡಿಕೆಯಲ್ಲಿ ವಿವರಿಸಲ್ಪಟ್ಟಂತೆ

ವಿಶ್ವಾಸಿಗಳಾದ ನಮಗೆ ಇರುವಂತಹ ಶುಭಸಂದೇಶವು ನಾವು ಕತ್ತಲೆಯೊಳಗಿಂದ ಬೆಳಕಿಗೆ ತರಲ್ಪಟ್ಟದ್ದಾಗಿದೆ.

## ಯೇಸುವೇ ಬೆಳಕು

ಯೇಸುವನ್ನು ಹಿಂಬಾಲಿಸುವವರು ಕತ್ತಲೆಯಲ್ಲಿ ನಡೆಯುವುದಿಲ್ಲ.

ಯೋಹಾನ 8:12

**ಯೇಸು ತಿರಿಗಿ ಅವರ ಸಂಗಡ ಮಾತಾಡಲಾರಂಭಿಸಿ ನಾನೇ ಲೋಕಕ್ಕೆ ಬೆಳಕು ನನ್ನನ್ನು ಅನುಸರಿಸುವವನು ಕತ್ತಲೆಯಲ್ಲಿ ನಡೆಯದೆ ಜೀವಕೊಡುವ ಬೆಳಕನ್ನು ಹೊಂದಿದವನಾಗಿರುವವನು ಎಂದು ಹೇಳಿದನು.**

ಯೋಹಾನ 12:46

**ನನ್ನನ್ನು ನಂಬುವ ಒಬ್ಬನಾದರೂ ಕತ್ತಲಲ್ಲಿ ಇರಬಾರದೆಂದು ನಾನು ಬೆಳಕಾಗಿ ಲೋಕಕ್ಕೆ ಬಂದಿದ್ದೇನೆ.**

## ಕರ್ತನಾದ ಯೇಸುವಿನ ರಾಜ್ಯ

ಬೆಳಕು ಕರ್ತನಾದ ಯೇಸುವಿನ ರಾಜ್ಯವನ್ನು ವ್ಯಾಖ್ಯಾನಿಸುತ್ತದೆ.

ಕೊಲೊಸ್ಸೆಯವರಿಗೆ 1:13

**ದೇವರು ನಮ್ಮನ್ನು ಅಂಧಕಾರದ ದೊರೆತನದಿಂದ ಬಿಡಿಸಿ ತನ್ನ ಪ್ರಿಯಕುಮಾರನ ರಾಜ್ಯದೊಳನೆ ಸೇರಿಸಿದನು.**

## ಹಗಲಿನ ಮಕ್ಕಳು

1 ಥೆಸಲೋನಿಕದವರಿಗೆ 5:5

**ನೀವೆಲ್ಲರು ಬೆಳಕಿನವರೂ ಹಗಲಿನವರೂ ಆಗಿದ್ದೀರಷ್ಟೆ ನಾವು ರಾತ್ರಿಯವರೂ ಅಲ್ಲ ಕತ್ತಲೆಯವರೂ ಅಲ್ಲ.**

ದೇವರು ಬೆಳಕಾಗಿದ್ದಾನೆ ಆತನಲ್ಲಿ ಕತ್ತಲೆಯಿಲ್ಲ ಆದ್ದರಿಂದ 'ಬೆಳಕು' ಎಂಬ ಪದವು ದೇವರು ಇರುವಂತಹ ಅಧಿಪತ್ಯವನ್ನು ಉಲ್ಲೇಖಿಸುತ್ತದೆ.

1 ಯೋಹಾನ 1:5,6

**ನಾವು ಆತನಿಂದ ಕೇಳಿ ನಿಮಗೆ ತಿಳಿಸುವ ವಾರ್ತೆ ಯಾವದೆಂದರೆ ದೇವರು ಬೆಳಕಾಗಿದ್ದಾನೆ ಮತ್ತು ಆತನಲ್ಲಿ ಎಷ್ಟು ಮಾತ್ರವೂ ಕತ್ತಲೆಯಿಲ್ಲ ಎಂಬದೇ ನಾವು ದೇವರ ಸಂಗಡ ಅನ್ಯೋನ್ಯತೆಯುಳ್ಳವರಾಗಿದ್ದೇವೆಂದು ಹೇಳಿ ಕತ್ತಲೆಯಲ್ಲಿ ನಡೆದರೆ ಸುಳ್ಳಾಡುವವರಾಗಿದ್ದೇವೆ ಸತ್ಯವನ್ನನುಸರಿಸುವವರಲ್ಲ.**

ಎಫೆಸದವರಿಗೆ 5:8,11

**ನೀವು ಹಿಂದಿನ ಕಾಲದಲ್ಲಿ ಕತ್ತಲೆಯಾಗಿದ್ದೀರಿ. ಆದರೆ ಈಗ ನೀವು ಕ್ರಿಸ್ತನಲ್ಲಿದ್ದು ಬೆಳಕಾಗಿದ್ದೀರಿ. ಬೆಳಕಿನವರಂತೆ ನಡೆದುಕೊಳ್ಳಿರಿ ಕತ್ತಲೆಗೆ ಸಂಬಂಧವಾದ ಕೃತ್ಯಗಳಿಂದ ಯಾವ ಪ್ರಯೋಜನವೂ ಬರಲಾರದು ಅವುಗಳಲ್ಲಿ ಪಾಲುಗಾರರಾಗಿರದೆ ಅವುಗಳನ್ನು ಬೈಲಿಗೆ ತಂದು ಖಂಡಿಸಿರಿ.**

ನಾವು ಒಮ್ಮೆ ಅಂಧಕಾರದಲ್ಲಿದ್ದೆವು ಆದರೆ ಕರ್ತನಲ್ಲಿ ನಾವು ಬೆಳಕಿನಲ್ಲಿದ್ದೇವೆ ಮತ್ತು ಅಂಧಕಾರದ ನಿಷ್ಫಲವಾದ ಕೃತ್ಯಗಳಲ್ಲಿ ನಾವು ಭಾಗಿಗಳಾಗಬಾರದು.

ರೋಮಾಪುರದವರಿಗೆ 12:1,2

**ಆದದರಿಂದ ಸಹೋದರರೇ ದೇವರ ಕನಕರವನ್ನು ನಿಮ್ಮ ನೆನಪಿಗೆ ತಂದು ನಿಮ್ಮನ್ನು ಬೇಡಿಕೊಳ್ಳುವದೇನೆಂದರೆ ನೀವು ನಿಮ್ಮ ನಿಮ್ಮ ದೇಹಗಳನ್ನು ದೇವರಿಗೆ ಮೀಸಲಾಗಿಯೂ ಮೆಚ್ಚಿಗೆಯಾಗಿಯೂ ಇರುವ ಸಜೀವಯಜ್ಞವಾಗಿ ಅರ್ಪಿಸಿರಿ. ಇದೇ ನಿಮ್ಮ ವಿವೇಕಪೂರ್ವಕವಾದ ಆರಾಧನೆಯು ಇಹಲೋಕದ ನಡವಳಿಕೆಯನ್ನು ಅನುಸರಿಸದೆ ನೂತನ ಮನಸ್ಸನ್ನು ಹೊಂದಿಕೊಂಡು ಪರಲೋಕದವರಾಗಿರಿ ಹೀಗಾದರೆ ದೇವರ ಚಿತ್ತಕ್ಕನುಸಾರವಾದದ್ದೂ ದೋಷವಿಲ್ಲದ್ದೂ ಯಾವಯಾವದೆಂದು ವಿವೇಚಿಸಿ ತಿಳುಕೊಳ್ಳುವಿರಿ.**

''ಯಾವಯಾವದೆಂದು ವಿವೇಚಿಸಿ ತಿಳುಕೊಳ್ಳದೇ ನಿಮ್ಮ ಸಂಸ್ಕೃತಿಗೆ ಉತ್ತಮವಾಗಿ-ಹೊಂದಿಕೊಳ್ಳುವವರಾಗಿ ಕಂಡು ಬರುವವರಾಗಿರಬೇಡಿರಿ'' ಎಂಬುದಾಗಿ ಅದೇ ವಚನವನ್ನು ಮೆಸೇಜ್ ಬೈಬಲ್ ವ್ಯಾಖ್ಯಾನಿಸುತ್ತದೆ (ರೋಮಾಪುರದವರಿಗೆ 12:20)

ಅನುಗುಣವಾಗಿ=ಬೇರೊಬ್ಬರ ನೋಟ, ರೂಪ ಅಥವಾ ಆಕಾರ ತೆಗೆದುಕೊಳ್ಳುವುದು.

ಲೋಕವು ಕೈಗೆತ್ತಿಕೊಂಡಿರುವ ಜೀವನ ಶೈಲಿ, ಉಡುಪು ಯಾವುದೇ ಹವ್ಯಾಸಗಳು, ನಡವಳಿಕೆಗಳನ್ನು ಇದು ಸೂಚಿಸುತ್ತದೆ.

ವಯಸ್ಸು ಗ್ರೀಕ್‌ನಲ್ಲಿ ಅಯಾನ್(Aion) =ವಯಸ್ಸು ಅಥವಾ ಜನರ ಪೀಳಿಗೆ

ರೂಪಾಂತರಗೊಂಡಿದೆ= ಇನ್ನೊಂದು ರೂಪದಲ್ಲಿ ಇರಿಸುವುದು.

ವಿಶ್ವಾಸಿಗಳಾಗಿ, ಜೀವನ ಮಾಡುವ ರೀತಿಯಲ್ಲಿ ಒಂದು ನಿಜವಾದ ಮತ್ತು ತೀವ್ರವಾದ ವ್ಯತ್ಯಾಸವಿರುವುದು ಅತ್ಯಗತ್ಯವಾಗಿದೆ. ನಾವು ಒಮ್ಮೆ ಕತ್ತಲೆಯಲ್ಲಿದ್ದೇವು. ಆದರೆ ಈಗ ಕರ್ತನ ಬೆಳಕಿನಲ್ಲಿ ಇದ್ದೇವೆ. ಆದ್ದರಿಂದ ನಾವು ಬೆಳಕಿನ ಮಕ್ಕಳಾಗಿ ನಡೆಯುವವರಾಗಿರಬೇಕು. 'ನಡೆ' ಎಂಬ ಪದವು ಸಾಮಾನ್ಯವಾಗಿ ನಾವು ತಿರುಗಾಡುವ ಸ್ಥಳವನ್ನು ಸೂಚಿಸುವುದಿಲ್ಲ ಆದರೆ ನಮ್ಮ ಸಂಪೂರ್ಣ ಅಸ್ತಿತ್ವವಾದಂತಹ–ನಮ್ಮ ಜೀವಿತಗಳು, ನಾವು ಜೀವಿಸುವ ರೀತಿ, ನಮ್ಮ ಗುಣನಡತೆಗಳು–ಕತ್ತಲೆಯಲ್ಲಿನಡೆಯದೇ ಬೆಳಕಿನಲ್ಲಿ ಜೀವಿಸುವವರ ಮಾದರಿಯಲ್ಲಿರುವಂತೆ ನಮ್ಮ ಜೀವಿತದಲ್ಲಿ ಎಲ್ಲವೂ ಅಸ್ತಿತ್ವದಲ್ಲಿರುವಿಕೆಯನ್ನು ಸೂಚಿಸುತ್ತದೆ. ನಾವು ಬೆಳಕಿನಲ್ಲಿರುವವರಂತೆ ನಡೆಯುವಾಗ ಕತ್ತಲೆಯಲ್ಲಿರುವವರ ವಿರುದ್ಧವಾಗಿ ನಾವು ಓಡುವಂತಹವರಾಗಿರುತ್ತೇವೆ. ಯಾಕೆಂದರೆ ಲೋಕವು ಅಂಧಕಾರವಾಗಿದೆ ಮತ್ತು ನಾವು ಬೆಳಕಾಗಿದ್ದೇವೆ. ನಾವು ಅವರಿಗೆ ವಿಚಿತ್ರವಾಗಿ ಕಾಣಿಸಬಹುದು. ನಾವು ಅವರಿಗೆ ಪರಕೀಯರಂತೆ ಕಾಣಬಹುದು ಮತ್ತು ಅವರು ನಮ್ಮನ್ನು ಅರ್ಥಮಾಡಿಕೊಳ್ಳುವುದಿಲ್ಲ. ಏಕೆ? ಯಾಕೆಂದರೆ ನಾವು ಬೆಳಕಾಗಿದ್ದೇವೆ! ಮತ್ತು ಕತ್ತಲೆಯಲ್ಲಿರುವವರಿಗಿಂತ ನಾವು ಸಂಪೂರ್ಣವಾಗಿ ವಿರುದ್ಧವಾಗಿರುವರಾಗಿದ್ದೇವೆ.

ಬೆಳಕಿನ ಮಕ್ಕಳಾಗಿ ನಡೆಯಬೇಕೆಂದು ಸತ್ಯವೇದವು ನಮಗೆ ಉಪದೇಶಿಸುತ್ತೆ. ಆದ್ದರಿಂದ ಕತ್ತಲೆಯ ಜನರಿಂದ ನಾವುಗಳು ವಿಭಿನ್ನವಾದ ಮಾರ್ಗದಲ್ಲಿ ಹೋಗುವವರಾಗಿದ್ದೇವೆ. ನಾವು ಭಿನ್ನವಾದವರು! ಕತ್ತಲೆಯ ನಿಷ್ಫಲವಾದ ಕ್ರಿಯೆಗಳೊಂದಿಗೆ ನಾವು ಅನ್ಯೋನ್ಯತೆಯಲ್ಲಿರಬಾರದು ಬದಲಿಗೆ ಅವರನ್ನು ಬಹಿರಂಗಗೊಳಿಸಬೇಕು. ಯಾಕೆಂದರೆ ನಾವು ಬೆಳಕಿನ ಜನರಾಗಿದ್ದೇವೆ, ನಾವು ಬೆಳಕಿಗನುಸಾರವಾಗಿ ನಡೆಯಬೇಕು. ಕತ್ತಲೆಯಲ್ಲಿರುವವರೊಂದಿಗೆ ಪಾಲುಗಾರಿಕೆ ಅಥವಾ ಅನ್ಯೋನ್ಯತೆ ನಾವು ಹೊಂದಿರಬಾರದು. ನಾವು ''ಅನ್ಯೋನ್ಯತೆ'' ಎಂಬ ಪದದ ಕುರಿತು ಮಾತಾಡುವಾಗ, ನಾವು ಒಂದೇ ಹಡಗಿನಲ್ಲಿರುವ ಇಬ್ಬರು ಜೊತೆಗಾರರನ್ನು ಚಿತ್ರಿಸಬಹುದು! ಕತ್ತಲೆಯಲ್ಲಿ ಇರುವವರೊಡನೆ ಅನ್ಯೋನ್ಯತೆಯಿಲದವರಾಗಿ

ಪ್ರಪಂಚದ ಹಡಗಿನಲ್ಲಿ ''ಪ್ರವೇಶಿಸುವುದರ'' ವಿರುದ್ಧವಾಗಿ ನಮಗೆ ಸತ್ಯವೇದವು ಎಚ್ಚರಿಕೆ ನೀಡುತ್ತದೆ. ಬದಲಿಗೆ ಅವರನ್ನು ನಾವು ಬಹಿರಂಗಗೊಳಿಸಬೇಕು. ನಾವು ನಮ್ಮ ಸ್ವಂತ ಹಡಗು-ಬೆಳಕಿನ ಹಡಗಿನಲ್ಲಿ ಸವಾರಿ ಅಥವಾ ಯಾನ ಮಾಡಬಾರದು ಪ್ರಪಂಚವು ಕತ್ತಲೆಯ ಹಡಗಿನಲ್ಲಿ ಹೋಗುತ್ತಿರಬಹುದು ಆದರೆ ಅವರೊಂದಿಗೆ ನಾವು ಒಳಗೆ ಜಿಗಿಯಲು ಆಗುವುದಿಲ್ಲ. ಅಂಧಕಾರದ ಕ್ರಿಯೆಗಳೊಂದಿಗೆ - ಅಂಧಕಾರದ ನಡವಳಿಕೆಯೊಡನೆ ನಾವು ಅನ್ಯೋನ್ಯತೆ ಹೊಂದಲೂ ಸಾಧ್ಯವಿಲ್ಲ. ಬೆಳಕಿನವರಾದ ನಮಗೆ ಅವರು ಮಾಡುವಂತಹ ಅದೇ ಕಾರ್ಯವನ್ನು ಅವರೊಡನೆ ಮಾಡುವುದರಲ್ಲಿ ಪಾಲುಗಾರರಾಗಲೂ ಸಾಧ್ಯವಿಲ್ಲ.

ಪ್ರಪಂಚಕನುಸಾರವಾಗಿ ನಾವು ಆದರ್ಶವುಳ್ಳವರಾಗಿರಬೇಕೆಂದು ದೇವರು ನಮ್ಮ ಕೇಳುವುದಿಲ್ಲ ಆದರೆ ಬದಲಿಗೆ ರೂಪಾಂತರ ಹೊಂದಿದವರಾಗಿರಬೇಕೆಂಬುದಾಗಿ ಕೇಳುತ್ತಾನೆ. ನಾವು ಹಿಂದೆಯೇ ವಿವರಿಸಿದ ಹಾಗೇ ''ರೂಪಾಂತರಗೊಂಡಿದೆ'' ಎಂಬುದು ಗ್ರೀಕ್ ಪದವಾದ 'ಮೆಟಾಮೊರ್ಫೋಸ್' (Metamorphose) ನಿಂದ ಬಂದಿದೆ ಇದು ಒಂದು ಕಂಬಳಿಹುಳು ಮತ್ತು ಒಂದು ಚಿಟ್ಟೆಯ ನಡುವೆಯಿರುವ ವ್ಯತ್ಯಾಸವಾಗಿದೆ. ಅದರಂತೆಯೇ ನಾವುಗಳು ವಿಭಿನ್ನವಾದ ರೂಪಗಳು ನಡವಳಿಕೆಗಳು ಮತ್ತು ಆಲೋಚನೆ ಮಾದರಿಗಳನ್ನು ತೆಗೆದುಕೊಳ್ಳಬೇಕು. ಈ ಲೋಕದ ನಡವಳಿಕೆ ಜೀವನಶೈಲಿ, ಹವ್ಯಾಸ, ವೈಖರಿ, ಸಾಂದರ್ಯ ಮತ್ತು ನೋಟಗಳನ್ನು ತೆಗೆದುಕೊಳ್ಳುವ ಈ ಲೋಕಕ್ಕೆ ಅನುಗುಣವಾಗಿ ನಾವು ಇರಬಾರದು.

ನಾವು ರೂಪಾಂತರಗೊಂಡಾಗ, ನಾವು ಲೋಕಕ್ಕಿಂತ ಭಿನ್ನವಾಗಿರುತ್ತೇವೆ. ಆದ್ದರಿಂದ ನಾನು ಮತ್ತು ನೀವುಗಳು ಪ್ರಪಂಚಕ್ಕೆ ಅನುಗುಣವಾಗಿರಲೂ ಸಾಧ್ಯವಿಲ್ಲ; ನಾವು ಲೋಕದಿಂದ ಭಿನ್ನವಾಗಿರಲೂ, ರೂಪಾಂತರಗೊಂಡವರಾಗಿರಲೂ ದೇವರಿಂದ ಕರೆಯಲ್ಪಟ್ಟಿದ್ದೇವೆ.

# 2

# ದೇವರ ವಾಕ್ಯ ಎದುರಾಗಿ ಪ್ರಪಂಚದ ಸಂಸ್ಕೃತಿ

## ನಾವು ಜೀವಿಸುವಂತಹ ಸಂಸ್ಕೃತಿಗಿಂತ ದೇವರ ವಾಕ್ಯವು ಉನ್ನತವಾದ ಅಧಿಕಾರವಾಗಿದೆ

ನಾವು ಜೀವಿಸುವಂತಹ ಸಂಸ್ಕೃತಿ ಬೆಳಕಿಗಿಂತ ಅಧಿಕವಾಗಿ ಕತ್ತಲೆಯಿಂದ ಪ್ರಭಾವಿತಗೊಂಡಿದೆ ಎಂಬುದನ್ನು ನಾವು ಅರ್ಥಮಾಡಿಕೊಳ್ಳಬೇಕು. ನಾವು ಇಹಲೋಕದ ಸಂಸ್ಕೃತಿಗನುಸಾರವಾಗಿ ಜೀವಿಸುವುದಿಲ್ಲ ಆದರೆ ಬೆಳಕಿನ ಸಂಸ್ಕೃತಿ ದೇವರ ರಾಜ್ಯದ ಸಂಸ್ಕೃತಿಯ ಭಾಗಗಳಾಗಿದ್ದೇವೆ. ಈ ''ದೇವರ ರಾಜ್ಯದ ಸಂಸ್ಕೃತಿಯು'' ನಮಗೆ ದೇವರ ವಾಕ್ಯದಲ್ಲಿ ಉಚ್ಚರಿಸಲಾಗಿದೆ. ಪ್ರಪಂಚದ ಸಂಸ್ಕೃತಿಯಲ್ಲಿ ಅಂಗೀಕರಿಸಲ್ಪಡುವುದು ಬರೆಯಲ್ಪಟ್ಟ ದೇವರ ವಾಕ್ಯಕ್ಕೆ ತದ್ವಿರುದ್ಧವಾಗಿರುವಂತದ್ದು. ಆದರೆ ದೇವರು ಆತನ ವಾಕ್ಯಗಳಿಗೆ ವಿಧೇಯರಾಗಬೇಕೆಂದು ಬಯಸುತ್ತಾನೆ. ನಾವು ಬೆಳಕಿನಲ್ಲಿರುವವರಂತೆ ನಡೆಯುವಾಗ ನಾವು ವಿಭಿನ್ನರಾದವರು ಆಗುತ್ತೇವೆ. ನಾವು ಶುದ್ಧೀಕರಿಸಲ್ಪಟ್ಟ ಜನರಾಗುತ್ತೇವೆ. ಕತ್ತಲೆಯಿಂದ ಬೆಳಕಿನೆಡೆಗೆ ಕರೆದಂತವರಾಗಿ ಆತನಿಗೆ ಸ್ತೋತ್ರ ಅರ್ಪಿಸುವಂತಹ ಆತನ ಸ್ವಂತ ವಿಶೇಷ ಜನರುಗಳು ನಾವಾಗುತ್ತೇವೆ.

ರೋಮಾಪುರದವರಿಗೆ 12:2 ಅ(ಮೇಸೇಜ್ ಬೈಬಲ್)
**ನೀವು ಆಲೋಚನೇ ಮಾಡದೇ ಹೊಂದಿಕೊಳ್ಳುವಂತಹ ನಿಮ್ಮ ಸಂಸ್ಕೃತಿಗೆ ತುಂಬಾ ಹೊಂದಿಕೊಂಡವರಾಗಿ ಕಂಡು ಬರಬೇಡಿರಿ.**

ನಾವು ಜೀವಿಸುವಂತಹ ಸಂಸ್ಕೃತಿಯ ಭಾಗವಾಗಿರುವುದರಿಂದ ವಿಷಯಗಳನ್ನು ನಮ್ಮಲ್ಲಿ ಅನೇಕರು ಸುಮ್ಮನೇ ಮಾಡುತ್ತಿರಬಹುದು. ಅದರ ಕುರಿತು ಆಲೋಚನೆ ಮಾಡದೇ ಸಂಸ್ಕೃತಿಗೆ ಹೊಂದಿಕೊಳ್ಳಬೇಡಿರಿ ಎಂಬುದಾಗಿ ಸತ್ಯವೇದವು ನಮಗೆ ಎಚ್ಚರಿಕೆ ನೀಡುತ್ತದೆ. ನಾವು ಜೀವಿಸುವಂತಹ ಸಂಸ್ಕೃತಿಗಿಂತ ದೇವರ ವಾಕ್ಯವು ಹೇಳುವಂತದ್ದು ಎಷ್ಟೋ ಉತ್ತಮವಾಗಿದೆ. ಪ್ರಪಂಚದ ಸಂಸ್ಕೃತಿಯಲ್ಲಿ ಯಾವುದಾದರೂ ದೇವರ ವಾಕ್ಯಕ್ಕೆ ವಿರೋಧಭಾಸವಾಗಿದ್ದರೆ, ನಮ್ಮ ಸಂಸ್ಕೃತಿಯನ್ನು ರದ್ದುಗೊಳಿಸಲೂ ದೇವರ ವಾಕ್ಯಕ್ಕೆ ವಿಧೇಯರಾಗುವ ಆಯ್ಕೆಯನ್ನು ಮಾತ್ರವೇ ಮಾಡಬೇಕು. ಅದಕ್ಕೆ

ಸತ್ಯವೇದವು ನಮಗೆ ಹೀಗೆ ಉಪದೇಶಿಸುತ್ತದೆ: ''ಇಹಲೋಕದ ನಡವಳಿಕೆಯನ್ನು ಅನುಸರಿಸದೆ'' (ರೋಮಾಪುರದವರಿಗೆ 12:2ಅ)

ವಯಸ್ಸು ಅನ್ನುವುದಕ್ಕೆ ಗ್ರೀಕ್‌ಪದವು ''ಅಯಾನ್'' (aion) ಇದು ಪ್ರಸ್ತುತ ಸಮಯದ ನಡವಳಿಕೆಯನ್ನು ತಿಳಿಸುತ್ತದೆ. ನಿಮ್ಮ ಸುತ್ತಲಿನ ಪ್ರಪಂಚದ ಸಂಸ್ಕೃತಿಗೆ ಅನುಗುಣವಾಗಿ ಇರಬೇಡಿರಿ ಬದಲಿಗೆ ರೂಪಾಂತರಗೊಂಡವರಾಗಿರಿ. ಇದು ಒಂದು ದೇವರ ಆಜ್ಞೆಯಾಗಿದೆ. ಕೇವಲ ಒಂದು ಸಲಹೆಯಲ್ಲ ಆಮೆನ್!

# 3

# ನಾವು ವಿಭಿನ್ನವಾದವರು

ನಾನು ಮತ್ತು ನೀವು ಈ ಪ್ರಪಂಚದಿಂದ ವಿಭಿನ್ನವಾಗಿರಲು ಕನಿಷ್ಠ ಪಕ್ಷ ಎರಡು ಕ್ಷೇತ್ರಗಳಿವೆ

## ನಾವು ಪ್ರಮಾಣಿಕತೆ ಮತ್ತು ನ್ಯಾಯಪರತೆಗೆ ಬದ್ಧರಾಗಿದ್ದೇವೆ

ಪ್ರಪಂಚವು ಪ್ರಮಾಣಿಕತೆ ಮತ್ತು ಸತ್ಯಪರತೆಗೆ ಕಾಳಜಿ ವಹಿಸುವುದಿಲ್ಲ ಯಾಕೆಂದರೆ ಅವರು ಕತ್ತಲೆಯಲ್ಲಿದ್ದಾರೆ ಆದರೆ ಸತ್ಯವೇದವು ಹೇಳುವುದರ ನಿಮಿತ್ತದಿಂದ ನಾವು ಬೆಳಕಿನ ಜನರಾಗಿ, ಪ್ರಾಮಾಣಿಕತೆ ಮತ್ತು ನ್ಯಾಯಪರತೆಗೆ ಬದ್ಧತೆಯುಳ್ಳವರಾಗಿ ಬೆಳಕಿನ ಮಕ್ಕಳಂತೆ ನಾವು ನಡೆಯಬೇಕು

1 ಪೇತ್ರನು 2:9–12

**ನೀವಾದರೋ ನಿಮ್ಮನ್ನು ಕತ್ತಲೆಯೊಳಗಿಂದ ಕರೆದು ತನ್ನ ಆಶ್ಚರ್ಯಕರವಾದ ಬೆಳಕಿನಲ್ಲಿ ಸೇರಿಸಿದಾತನ ಗುಣಾತಿಶಯಗಳನ್ನು ಪ್ರಚಾರಮಾಡುವವರಾಗುವಂತೆ ದೇವರಾದುಕೊಂಡ ಜನಾಂಗವೂ ರಾಜವಂಶಸ್ಥರಾದ ಯಾಜಕರೂ ಮೀಸಲಾದ ಜನವೂ ದೇವರ ಸ್ವಕೀಯ ಪ್ರಜೆಯೂ ಆಗಿದ್ದೀರಿ. ಮೊದಲು ನೀವು ಪ್ರಜೆಯಾಗಿರಲಿಲ್ಲ ಈಗ ದೇವರ ಪ್ರಜೆಯಾಗಿದ್ದೀರಿ ಮೊದಲು ವಾತ್ಸಲ್ಯ ಹೊಂದಿರಲಿಲ್ಲ ಈಗ ವಾತ್ಸಲ್ಯ ಹೊಂದಿದವರಾಗಿದ್ದೀರಿ. ಪ್ರಿಯರೇ ಪ್ರವಾಸಿಗಳೂ ಪರದೇಶಸ್ಥರೂ ಆಗಿರುವ ನೀವು ನಿಮ್ಮ ಆತ್ಮದ ಮೇಲೆ ಯುದ್ಧಮಾಡುವ ಶಾರೀರಿಕ ಅಭಿಲಾಷೆಗಳಿಗೆ ದೂರವಾಗಿರಬೇಕೆಂದು ನಿಮ್ಮನ್ನು ಎಚ್ಚರಿಸುತ್ತೇನೆ. ನಿಮ್ಮ ನಡವಳಿಕೆಯು ಅನ್ಯಜನರ ಮಧ್ಯದಲ್ಲಿ ಯೋಗ್ಯವಾಗಿರಲಿ ಆಗ ಅವರು ಯಾರ ವಿಷಯದಲ್ಲಿ ನಿಮ್ಮನ್ನು ಅಕ್ರಮಗಾರರೆಂದು ನಿಂದಿಸುತ್ತಾರೋ ಆ ವಿಷಯದಲ್ಲಿಯೇ ನಿಮ್ಮ ಸತ್ಕ್ರಿಯೆಗಳನ್ನು ಕಣ್ಣಾರೆ ಕಂಡು ವಿಚಾರಣೆಯ ದಿನದಲ್ಲಿ ದೇವರನ್ನು ಕೊಂಡಾಡುವರು.**

ಕತ್ತಲೆಯೊಳಗಿಂದ ಆತನ ಅದ್ಭುತಕರವಾದ ಬೆಳಕಿಗೆ ಕರೆಯಲ್ಪಟ್ಟಂತಹ ನಾವುಗಳು ಆತನಿಗೆ ಸ್ತೋತ್ರಗಳನ್ನು ತೋರಿಸುವವರಾಗಿರಬೇಕು. ವಿಶ್ವಾಸಿಗಳಾಗಿ, ರಕ್ಷಿಸಲ್ಪಡದಂತಹ ಪ್ರಪಂಚದ ''ಅನ್ಯಜನರುಗಳ'' ಮುಂದೆ ಪ್ರಾಮಾಣಿಕತೆಯಿಂದಲೂ ಮತ್ತು ಗೌರವಾನ್ವಿತವಾಗಿ ನಡೆಯಲು ಕರೆಯಲ್ಪಟ್ಟಿದ್ದೇವೆ ಆದ್ದರಿಂದ ಬೆಳಕಿನ ಜನರುಗಳಾಗಿ ನಾವುಗಳು ಪ್ರಾಮಾಣಿಕತೆ ಮತ್ತು ನ್ಯಾಯಪರತೆಗೆ ಬದ್ಧತೆಯಿಂದಿರಬೇಕು. ನಾವು

ಪ್ರಾಮಾಣಿಕತೆ ಮತ್ತು ಸತ್ಯಪರತೆಗೆ ಬದ್ಧತೆಯುಳ್ಳವರಾಗಿರುವುದರಿಂದ ಜನರು ನಮ್ಮನ್ನು ನೋಡುವಾಗ ನಾವು ವಿಭಿನ್ನವಾದವರು ಅಂದುಕೊಳ್ಳಬೇಕು.

## ವಿದ್ಯಾರ್ಥಿಗಳಂತೆ

ಉದಾಹರಣೆಗೆ ಶಾಲೆಯಲ್ಲಿ ಅಥವಾ ಕಾಲೇಜುಗಳಲ್ಲಿ ನೀವು ಪರೀಕ್ಷೆಗಳನ್ನು ಬರೆಯುವಾಗ ನಿಮ್ಮ ಸಂವೀಕ್ಷಕರು ಚಹಾ ವಿರಾಮಕ್ಕಾಗಿ ಹೊರಗೆ ಹೋಗುತ್ತಾರೆಂದು ಮತ್ತು ಪ್ರತಿಯೊಬ್ಬರು ನೋಡಿಕೊಂಡು ನಕಲು ಮಾಡಲೂ ಅಥವಾ ಕಾಪಿ ಮಾಡಲು ಪ್ರಾರಂಭಿಸಿದರು ಎಂಬುದಾಗಿ ಊಹಿಸಿಕೊಳ್ಳಿರಿ. ನಿಮ್ಮ ಪಕ್ಕದಲ್ಲಿ ಕುಳಿತಿರುವ ವ್ಯಕ್ತಿಯು ಅದನ್ನೇ ಮಾಡಲೂ ನಿನಗೆ ಹೇಳುತ್ತಾನೆ. ಆದರೆ ನೀನು ಕಾಪಿ ಮಾಡುವುದನ್ನು ಅಥವಾ ಮೋಸ ಮಾಡುವುದನ್ನು ತಿರಸ್ಕರಿಸಬೇಕು ಯಾಕೆಂದರೆ ನಿಮ್ಮ ಸಂವೀಕ್ಷಕರು ಅಥವಾ ಪರೀಕ್ಷಾ ಮೇಲ್ವಿಚಾರಕರು ಒಳಗೆ ಬರುತ್ತಾರೆ ಎಂಬ ಭಯವಲ್ಲ ಆದರೆ ನೀವು ಬೆಳಕಿನ ಮಗು ಎಂಬುದಾಗಿ ನಿಮಗೆ ಗೊತ್ತಿರುವುದರಿಂದ ಮಾಡಲಾಗುವುದಿಲ್ಲ.

ಜೊತೆಗೆ ನಿಮ್ಮ ಮನೆ ಪಾಠದ ನಿಯೋಜನೆ ಮಾಡುವಾಗ ನಿಮ್ಮ ಸಹಪಾಠಿಯಿಂದ ಮನೆಗೆ ಕೊಟ್ಟ ಪಾಠ ನಿಯೋಜನೆಯನ್ನು ಕಾಪಿ ಅಥವಾ ನಕಲು ಮಾಡಿ ಅದು ನಿನ್ನದೇ ಎಂಬುದಾಗಿ ನಟಿಸಬಾರದು. ಏಕೆ? ಯಾಕೆಂದರೆ ನೀವು ಪ್ರಾಮಾಣಿಕತೆಗೆ ಮತ್ತು ನ್ಯಾಯಪರತೆಗೆ ಬದ್ಧತೆಯುಳ್ಳವರಾಗಿದ್ದೀರಿ!

## ವೃತ್ತಿಪರರಾಗಿ

ವೃತ್ತಿಪರರಾಗಿ ನಿಮ್ಮ ಜೀವಿತದಲ್ಲಿ ಪ್ರಾಮಾಣಿಕತೆಯನ್ನು ಪಾಲಿಸಬೇಕು. ನೀವು ಒಬ್ಬ ವೃತ್ತಿಪರನಲ್ಲ ಆದರೆ ಕತ್ತಲೆಯಲ್ಲಿರುವ ಒಬ್ಬ ವೃತ್ತಿಪರನಿಂದ ಭಿನ್ನವಾಗಿ ಮಾಡಲ್ಪಟ್ಟಂತಹ ಬೆಳಕಿನ ಮಗುವು ನೀವಾಗಿದ್ದೀರಿ. ನಿಮ್ಮಲ್ಲಿ ಇಬ್ಬರು ಒಂದೇ ವ್ಯಾಪಾರ ಕ್ಷೇತ್ರದಲ್ಲಿರಬಹುದು, ಆದರೆ ನೀವು ಸಂಪೂರ್ಣವಾಗಿ ಇಬ್ಬರು ವಿಭಿನ್ನ ಜನರಾಗಿರುತ್ತೀರಿ. ನೀವು ಪ್ರಮಾಣಿಕತೆ ಮತ್ತು ನ್ಯಾಯಪರತೆಗೆ ಬದ್ಧವಾಗಿರುವುದರಿಂದ ನಿಮ್ಮ ವೈಯಕ್ತಿಕ ಗುರುತೋಲೆಯಲ್ಲಿ ಸುಳ್ಳು ಹೇಳುವುದಿಲ್ಲ.

ನಾನು ಪ್ರಥಮವಾದ ನನ್ನ ಕೆಲಸಕ್ಕೆ ಅರ್ಜಿ ಸಲ್ಲಿಸುವಾಗ ವಿಶ್ವವಿದ್ಯಾನಿಲಯದಲ್ಲಿ ಹೆಚ್ಚಿನ ಸಮಯವನ್ನು ನಾನು ಸಂಶೋಧನೆ ಮಾಡುವುದರಲ್ಲಿ ಕಳೆದೆನು. ವಿಶ್ವವಿದ್ಯಾನಿಲಯದ ಹೊರಗಡೆ ಕೆಲಸ ಪಡೆಯಲು ಸಮಯ ಬಂದಾಗ, ಎಲ್ಲರೂ ಮಾಡುವಂತೆಯೇ ಉದ್ಯೋಗ ನೇಮಕ ಏಜೆನ್ಸಿಗಳಿಗೆ ನನ್ನ ವೈಯಕ್ತಿಕ

ಗುರುತೋಲೆ ಪತ್ರ ನೀಡಿದೆನು. ಒಬ್ಬ ಭಾರತೀಯನಿಂದ ನ್ಯೂಜೆರ್ಸಿಯಲ್ಲಿ ನಡೆಸಲಾಗುತ್ತಿದ್ದಂತಹ ಒಂದು ಉದ್ಯೋಗ ನೇಮಕ ಏಜೆನ್ಸಿಯವರಿಗೆ ನನ್ನ ಸ್ನೇಹಿತನು ನನ್ನನ್ನು ಪರಿಚಯಿಸಿದನು. ಅವರು ವಾಗ್ದಾನ ನೀಡಿದಂತ ನನಗೆ ಉತ್ತಮ ಕೆಲಸ ಸಿಕ್ಕಬಹುದೆಂಬುದಾಗಿ ನನ್ನ ಗುರುತೋಲೆ ಪತ್ರ ನೀಡಿದೆನು. ಸ್ವಲ್ಪ ಸಮಯಗಳ ನಂತರ ನನ್ನ ಗುರುತೋಲೆ ಪತ್ರದಲ್ಲಿ ಕೆಲವು ಬದಲಾವಣೆ ಮಾಡಬೇಕೆಂಬುದಾಗಿ ನನಗೆ ಕರೆ ಬಂದಿತ್ತು ನನ್ನ ಗುರುತೋಲೆ (ರೆಸ್ಯೂಮ್) ಅವರು ''ಪುನಃ ಕೆಲಸ ಮಾಡಲಾಯಿತು'' ಮತ್ತು ರಾತ್ರೋರಾತ್ರಿ 2 ರಿಂದ 3 ವರ್ಷಗಳ ಕೆಲಸದ ಅನುಭವವನ್ನು ನಾನು ಹೆಸರೇ ಕೇಳದ ಕಂಪನಿಗಳಲ್ಲಿ ಹೊಂದಿದ್ದೇನೆಂದು ಅವರು ಬರೆದಿದ್ದರು! ಇಲ್ಲಿ ಒಂದು ಆಯ್ಕೆ ಇತ್ತು–ನಾನು ಬೆಳಕಿನ ಒಂದು ಮಗುವಾಗಿ ವಿಭಿನ್ನವಾಗಿರುವುದನ್ನು ಆರಿಸಿಕೊಳ್ಳಬೇಕು ಅಥವಾ ಕತ್ತಲೆಯ ಮಗುವಾಗಿ ಸುಳ್ಳು ಹೇಳಬಹುದಿತ್ತು. ಆ ಒಂದು ಕಂಪನಿಯೊಂದಿಗೆ ಅವರು ಸಿದ್ಧಪಡಿಸಿದ ಗುರುತೋಲೆ (ರೆಸ್ಯೂಮ್) ನಾನು ಉಪಯೋಗಿಸಲೂ ಸಾಧ್ಯವಾಗುವುದಿಲ್ಲ ಎಂದು ಹೇಳಿ ಏಜೆನ್ಸಿಯೊಂದಿಗೆ ಸಂಭಾಷಣೆ ಮಾಡುವುದನ್ನು ನಿಲ್ಲಿಸಿದೆ. ನನ್ನ ಗುರುತೋಲೆಯು ಬರೀ ಒಂದು ಪುಟದಲ್ಲಿ ಗುರುತೋಲೆಯಾಗಿತ್ತು ಮತ್ತು ಅಷ್ಟು ಮಾತ್ರವೇ. ದೇವರು ನನಗೆ ಒಳ್ಳೆಯ ಕಂಪನಿಯಲ್ಲಿ ಕೆಲಸ ದೊರಕಿಸಿಕೊಡುತ್ತಾನೆಂದು ನಂಬಿ, ಉದ್ಯಮದಲ್ಲಿರುವ ಉತ್ತಮ ಅಭ್ಯಾಸಗಳನ್ನು ನಾನು ಕಲಿಯಬಹುದೆಂದು ಅದನ್ನೆ ನಾನು ನೇರವಾಗಿ ಕಂಪನಿಗಳಿಗೆ ಕಳುಹಿಸಿಕೊಟ್ಟೆನು. ಆತನು ಕಾರ್ಯ ಮಾಡಿದನು! ನನ್ನ ಗುರುತೋಲೆಯ ಮೇಲೆ ಸುಳ್ಳು ಅಥವಾ ತಪ್ಪಾದನ್ನು ಹೊಂದಲಿಲ್ಲ.

ನಮ್ಮ ಸಂಸ್ಥೆಗೆ ಜನರನ್ನು ಸಂದರ್ಶನ ಮಾಡುವಾಗ ಒಬ್ಬ ಯೌವನಸ್ಥನು ನಮ್ಮ ತಾಂತ್ರಿಕ ಪರೀಕ್ಷೆಯನ್ನು ಉತ್ತಮವಾಗಿ ಮಾಡಿ ಅಂತಿಮ ಸುತ್ತಿನ ಸಂದರ್ಶನಕ್ಕೆ ನನ್ನ ಬಳಿ ಮಾತಾನಾಡಲೂ ಬಂದನು. ಯಾರಾರ ಬಳಿ ಕೆಲಸ ಮಾಡಿದ್ದೀಯಾ ಎಂಬುದಾಗಿ ನಾನು ಕೇಳಿದಾಗ ಅವನು ಅನೇಕ ಕಂಪನಿಗಳ ಹೆಸರು ಹೇಳಿದ ಮತ್ತು ಅವರ ವೆಬ್‌ಸೈಟ್ ವಿಳಾಸಗಳನ್ನು ನನಗೆ ನೀಡಿದ. ಆದರೆ ಅವನು ಕೊಟ್ಟಂತಹ ವೆಬ್ ಸೈಟ್‌ನ (URL) ನ್ನು ಪರೀಕ್ಷಿಸಿದಾಗ, ಅದು ಒಂದು ಸರ್ಚ್ ಎಂಜಿನ್ ಕಂಪನಿಯಂತೆ ಕಾಣಿಸುತ್ತಿತ್ತು ಮತ್ತು ಅವನು ಹೇಳಿದಂತಹ ಒಂದು ಸಾಫ್ಟ್‌ವೇರ್ ಡೆವಲಪ್‌ಮೆಂಟ್ ಕಂಪನಿ ಅದಾಗಿರಲಿಲ್ಲ. ನಾನು ಅವನೊಂದಿಗೆ ಪುನಃ ಪರೀಕ್ಷಿಸಿದಾಗ ಕಂಪನಿಯು ಅವರ ವೆಬ್‌ಸೈಟ್‌ನ್ನು ಬದಲಾಯಿಸಬಹುದೆಂಬುದಾಗಿ ಹೇಳಿದನು. ನಾನು ಅವರ ಫೋನ್ ನಂಬರ್ ಕೇಳಿದಾಗ ಅವನು ಸಿಮ್ ಕಾರ್ಡ್‌ನ್ನು ಬದಲಾಯಿಸಿದ್ದೇನೆ ಅವರ ನಂಬರ್ ಅವನ ಬಳಿ ಇಲ್ಲವೆಂದು ಹೇಳಿದನು. ನಾನು ಅವರ ಯಾವುದಾದರೂ ಲ್ಯಾಂಡ್‌ಲೈನ್

ನಂಬರ್ ಇದೆಯಾ ಎಂಬುದಾಗಿ ಕೇಳಿದೆ ಅವನು ಅದು ಸಹ ಇಲ್ಲಾ ಎಂಬುದಾಗಿ ಹೇಳಿದನು. ಅನೇಕ ಕಂಪನಿಗಳಲ್ಲಿ ಕೇವಲ ಕೆಲವು ದಿವಸಗಳು ಕೆಲಸ ಮಾಡಿದ ನಂತರ ಅವರ ಕಛೇರಿಯ ದೂರಾವಾಣಿ ಸಂಖ್ಯೆಗಳನ್ನು ಕಂಪನಿಯಾ ಉದ್ಯೋಗಸ್ಥರು ಇಟ್ಟುಕೊಂಡಿರುತ್ತಾರೆ ನೀನು ಒಂದು ವರ್ಷ ಕಂಪನಿಯಲ್ಲಿ ಉದ್ಯೋಗ ಮಾಡಿದ್ದೀಯಾ ಅವರ ಲ್ಯಾಂಡ್‌ಲೈನ್ ದೂರಾವಾಣಿ ನಂಬರ್ ಸಹ ನಿನ್ನ ಬಳಿ ಇಲ್ಲ ಅದು ಹೇಗೆ ಸಾಧ್ಯ ಎಂಬುದಾಗಿ ಕೇಳಿದೆನು. ಆ ಯೌವನಸ್ಥನು ಅಂತಿಮವಾಗಿ ತನ್ನ ಗುರುತೋಲೆಯಲ್ಲಿ ಉದ್ಯೋಗದ ಅನುಭವದ ಬಗ್ಗೆ ಸುಳ್ಳು ಹೇಳಿದ್ದಾನೆಂಬುದಾಗಿ ಒಪ್ಪಿಕೊಂಡನು.

ಒಂದು ಕ್ರೈಸ್ತ ಸಮಾವೇಶದಲ್ಲಿ ಮೂರು ದಿವಸಗಳು ಪ್ರಸಂಗಿಸಲೂ ನಾನು ಇನ್ನೊಂದು ನಗರಕ್ಕೆ ಹೋಗಿದ್ದಾರೆ ಅಂತಹ ರೀತಿಯ ಒಂದು ಘಟನೆಯು ನಡೆಯಿತು. ಕೂಟದ ಅವಧಿಯ ನಡುವೆಯಲ್ಲಿ ಆಗ ತಾನೇ ಬೆಂಗಳೂರಿಗೆ ಬಂದಿದ್ದಂತಹ ಒಬ್ಬ ಯೌವನಸ್ಥನನ್ನು ನನಗೆ ಪರಿಚಯಿಸಿದರು ಮತ್ತು ಸಾಫ್ಟ್‌ವೇರ್ ಡೆವಲಪ್ ಮೆಂಟ್‌ನ ನಿರ್ದಿಷ್ಟ ಕ್ಷೇತ್ರದಲ್ಲಿ ಕೆಲಸವನ್ನು ಹುಡುಕುತ್ತಿದ್ದನು. ಅವನ ಹೆಸರು, ವಿದ್ಯಾರ್ಹತೆಗಳು ಮತ್ತು ಹಿನ್ನಲೆಯನ್ನು ನಾನು ಕೇಳಿದೆನು. ''ಮೂರು-ತಿಂಗಳ ಕೋರ್ಸ್ ಮಾಡಿದ್ದೇನೆ. ಐದು ವರ್ಷಗಳ ಅನುಭವವಿದೆ'' ಎಂಬುದಾಗಿ ನನಗೆ ಹೇಳಿದನು ಅವನು ಹೇಳಿದ್ದರ ಅರ್ಥವೇನೆಂಬುದನ್ನು ತಿಳಿಯಲು ಬೆಂಗಳೂರಿಗೆ ಅವನು ಹಿಂತಿರುಗಿ ಬಂದಾಗ ನನ್ನನ್ನು ಭೇಟಿ ಮಾಡಲು ತಿಳಿಸಿದೆನು. ಆಮೇಲೆ ನನ್ನನ್ನು ಭೇಟಿ ಮಾಡಿ ಒಬ್ಬ ಸಭಾಪಾಲಕರೊಂದಿಗೆ ಪೂರ್ಣಾವಧಿ ಸೇವೆಯಲ್ಲಿ ಸಹಾಯಕರಾಗಿ ಎರಡು ವರ್ಷಗಳು ಕೆಲಸ ಮಾಡಿರುವುದಾಗಿ ವಿವರಿಸಿ ಹೇಳಿದನು. ಸ್ವಲ್ಪ ಸಮಯದ ನಂತರ ಒಂದು ಉದ್ಯೋಗದ ಅಗತ್ಯತೆಯಿತ್ತು. ಅದಕ್ಕೆ ಮೂರು ತಿಂಗಳುಗಳ ಒಂದು ವೃತ್ತಿಪರ ಕೋರ್ಸ್ ಸೇರಿಕೊಂಡನು, ಆನಂತರ ಅವನ ಗುರುತೋಲೆಯಲ್ಲಿ ಅವನು ಮಾಡಿರದಂತಹ ಉದ್ಯೋಗದ 5 ವರ್ಷದ ಅನುಭವವನ್ನು ಉಲ್ಲೇಖಿಸಿದ್ದನು. ನಾನು ಒಬ್ಬ ಸಭಾಪಾಲಕನಾಗಿದ್ದರ ನಿಮಿತ್ತವಾಗಿ ಅವನು ಸತ್ಯವನ್ನು ನನಗೆ ಹೇಳಿದೆನು ಎಂಬುದಾಗಿ ತಿಳಿಸಿಬಿಟ್ಟನು. ನಾನು ಯಾವ ರೀತಿ ಅದಕ್ಕೆ ಪ್ರತಿಕ್ರಿಯಿಸಬೇಕು ಎಂಬುದಾಗಿ ತಿಳಿದಿರಲಿಲ್ಲ ಆದರೆ ಅವನು ನನಗೆ ಸತ್ಯವನ್ನು ಹೇಳಿದನು ಎಂಬುದಾಗಿ ಸಂತೋಷವಾಯಿತು. ಸಭೆಯಲ್ಲಿ ಎರಡು ವರ್ಷಗಳು ಪೂರ್ಣಾವಧಿಯಲ್ಲಿ ದೇವರ ಸೇವೆ ಮಾಡುತ್ತಿದ್ದಂತಹವರು ಒಂದು ಉದ್ಯೋಗ ಪಡೆಯಲು ಸುಳ್ಳು ಹೇಳಿದ್ದರು ಎಂಬುದಕ್ಕೆ ನಾನು ದುಃಖವುಳ್ಳವನಾಗಿದ್ದೇನು.

ನಾವು ಬೆಳಕಿನ ಮಕ್ಕಳಾಗಿ ನಡೆಯಬೇಕೆಂದು ಸತ್ಯವೇದವು ಹೇಳುತ್ತದೆ ವೃತ್ತಿಪರರಾಗಿ ನಮ್ಮ ಪ್ರಾಮಾಣಿಕತೆಯಲ್ಲಿ ಯಾವುದೇ ರೀತಿಯಲ್ಲಿ ರಾಜಿ

ಮಾಡಿಕೊಳ್ಳಲಾಗುವುದಿಲ್ಲ ಎಂಬುದು ಇದರ ಅರ್ಥವಾಗಿದೆ. ಒಬ್ಬ ಕ್ರೈಸ್ತ ವೃತ್ತಿಪರ ಅಥವಾ ಉದ್ಯೋಗಸ್ಥನಾಗಿ ಕಛೇರಿಯ ಸೌಕರ್ಯಗಳನ್ನು ದುರುಪಯೋಗ ಮಾಡಿಕೊಳ್ಳಬಾರದು. ಸತ್ಯವೇದವು ಅದರ ಕುರಿತು ಹೀಗೆ ಹೇಳುತ್ತದೆ:

ತೀತನಿಗೆ 2:9,10

**ದಾಸರು ಎಲ್ಲಾದರಲ್ಲಿ ತಮ್ಮ ಯಜಮಾನರಿಗೆ ಅಧೀನರಾಗಿದ್ದು ಅವರನ್ನು ಮೆಚ್ಚಿಸುವುದಕ್ಕೆ ಪ್ರಯಾಸ ಪಡುತ್ತಾ ಎದುರುಮಾತನ್ನಾಡದೆ ಯಾವದನ್ನೂ ಕದ್ದಿಟ್ಟುಕೊಳ್ಳದೆ ಪೂರಾ ನಂಬಿಗಸ್ತರೆಂದು ಹೆಸರು ಹೊಂದಿ ನಮ್ಮ ರಕ್ಷಕನಾದ ದೇವರ ಉಪದೇಶಕ್ಕೆ ಎಲ್ಲಾ ವಿಷಯಗಳಲ್ಲಿ ಅಲಂಕಾರವಾಗಿರಬೇಕೆಂದು ಬೋಧಿಸು.**

ದಾಸರು–ಕರಾರಿನಲ್ಲಿರುವ ನೌಕರರು–ಅವರ ಯಜಮಾನರಿಗೆ ಅಥವಾ ಅವರ ಸ್ವಂತ ಉದ್ಯೋಗದಾತರಿಗೆ ವಿಧೇಯರಾಗಿರಬೇಕೆಂದು ಪ್ರೋತ್ಸಾಹಿಸಬೇಕು. ನೌಕರರು ಎಲ್ಲಾ ವಿಷಯಗಳಲ್ಲಿ ಮೆಚ್ಚಿಕೆಯಾಗಿರಬೇಕು ಮತ್ತು ಅವರ ಮೇಲಧಿಕಾರಿಗಳಿಗೆ ಒರಟುವುಳ್ಳವರು ಆಗಿರಬಾರದು. ಇದು ಸತ್ಯವೇದದ ನಿರ್ವಹಣೆಯ ತತ್ವವಾಗಿದೆ. ನೌಕರರು ಕದ್ದಿಟ್ಟುಕೊಳ್ಳುವವರಾಗಿರಬಾರದು. ಆದರೆ ಎಲ್ಲಾ ಸಂಗತಿಗಳಲ್ಲಿ ರಕ್ಷಕನು ಇರುವಂತಹ ದೈವಿಕ ಸಿದ್ಧಾಂತವನ್ನು ಅವರು ಅಲಂಕರಿಸಲು ಉತ್ತಮವಾದ ನಿಷ್ಠೆಯನ್ನು ತೋರಿಸಬೇಕು. ಆದ್ದರಿಂದ ಒಬ್ಬ ಕ್ರೈಸ್ತ ನೌಕರನಾಗಿ, ಉಳಿದ ಎಲ್ಲಾ ಉದ್ಯೋಗಸ್ಥರೂ ಕಛೇರಿಯಲ್ಲಿ ತಪ್ಪು ಮಾಡುತ್ತಿದ್ದರೆ, ಅವನು ಅಥವಾ ಆಕೆಯನ್ನು ಅನುಸರಿಸಬೇಡಿರಿ. ನೀವು ವಿಭಿನ್ನವಾಗಿರಬೇಕು. ಪಾವತಿಸಲ್ಪಟ್ಟಂತಹ ಸಂಬಳದ ಜೊತೆಗೆ ಕಛೇರಿಯಿಂದ ಅವರಿಗೆ ಬೇಕಾದದ್ದನ್ನು ನೌಕರರು ಸಹಾಯ ಪಡೆದುಕೊಳ್ಳುವ ನಿಮ್ಮ ಕಂಪನಿಯ ಅಸ್ಥಿರ ಸಂಸ್ಕೃತಿಯ ಭಾಗವಾಗಿರಬಹುದು. ಆದರೆ ನೀವು ಬೆಳಕಿನ ಮಕ್ಕಳಾಗಿರುವುದರಿಂದ, ನೀವು ನೌಕರರಾಗಿ ಕತ್ತಲೆಯಿಂದ ಬೆಳಕಿನೆಡೆಗೆ ಕರೆಯಲ್ಪಟ್ಟವರಾಗಿ ನಿಮಗೆ ಪಾವತಿಸಲ್ಪಡುವ ಸಂಬಳ ಮಾತ್ರ ತೆಗೆದುಕೊಳ್ಳಬೇಕು ಮತ್ತು ಪರಿಶ್ರಮದಿಂದ ಕೆಲಸ ಮಾಡಬೇಕು.

ಒಂದು ವಕ್ರವಾದ ಮತ್ತು ಒಂದು ದುಷ್ಟ ಸಂತತಿಯವರ ಮಧ್ಯದಲ್ಲಿ ನೀವು ದೇವರ ಮಗುವಾಗಿ ಈ ಪ್ರಪಂಚಕ್ಕೆ ನಿಮ್ಮನ್ನು ಹೇಗೆ ತೋರಿಸಿಕೊಳ್ಳುತ್ತೀರಿ? ಪ್ರಾಮಾಣಿಕ ಜನರಾಗಿ ಜೀವಿಸಬೇಕೆಂದು ಸತ್ಯವೇದ ಉಪದೇಶಿಸುತ್ತದೆ ಮತ್ತು ಗೊಣಗದೇ ಮತ್ತು ದೂರು ಹೇಳದೇ ಎಲ್ಲಾ ವಿಷಯಗಳನ್ನು ಮಾಡಬೇಕು. ಆದ್ದರಿಂದ ಇಂತಹ ವಕ್ರವಾದ ಮತ್ತು ದುಷ್ಟವಾದ ಸಂತತಿಯ ಮಧ್ಯದಲ್ಲಿ ನಮ್ಮನ್ನು ದೇವರು ಮಕ್ಕಳೆಂಬುದಾಗಿ ತೋರಿಸಬೇಕು.

ಫಿಲಿಪ್ಪಿಯವರಿಗೆ 2:14, 15

**ಗುಣಗುಟ್ಟದೆಯೂ ವಿವಾದವಿಲ್ಲದೆಯೂ ಎಲ್ಲವನ್ನು ಮಾಡಿರಿ ಹೀಗೆ ನೀವು ನಿರ್ದೋಷಿಗಳೂ ಯಥಾರ್ಥ ಮನಸ್ಸುಳ್ಳವರೂ ಆಗಿದ್ದು ವಕ್ರಬುದ್ಧಿಯುಳ್ಳ ಮೂರ್ಖ ಜಾತಿಯ ಮಧ್ಯದಲ್ಲಿ ದೇವರ ನಿಷ್ಕಳಂಕರಾದ ಮಕ್ಕಳಾಗಿರುವಿರಿ.**

ನಿಮ್ಮ ಸಹೋದ್ಯೋಗಿಗಳು ಗೊಣಗುತ್ತಿದ್ದರೆ ಮತ್ತು ಕಛೇರಿಯಲ್ಲಿ ದೂರು ಹೇಳುತ್ತಿದ್ದರೆ ನೀವು ಅದರೊಳಗೆ ಸೇರಿಕೊಂಡಿರುವುದಾದರೆ ನಿಮ್ಮ ಮತ್ತು ಅವರ ನಡುವೆ ವ್ಯತ್ಯಾಸವೇನಿದೆ? ನಾವು ಯಾವುದನ್ನು ಗೊಣಗುಟ್ಟದೇ ಮತ್ತು ದೂರು ಹೇಳದೇ ಮಾಡುವುದರಿಂದ ಬೆಳಕಿನ ಮಕ್ಕಳುಗಳಾಗಿ ತೋರಿಸಿಕೊಳ್ಳುವುದು ಅವಶ್ಯಕವಾಗಿದೆ. ಆಮೆನ್!

ವ್ಯಾಪಾರ ವಹಿವಾಟನ್ನು ಮಾಡುವಂತಹ ಉದ್ಯೋಗದಾತರು ಮತ್ತು ನಮ್ಮ ನೌಕರರಿಗೆ ಸಂಬಳಗಳ ಕುರಿತ ತೀರ್ಮಾನಗಳನ್ನು ಮಾಡುವಾಗ, ಅವರ ಕೂಲಿಯನ್ನು ಹಿಡಿದಿಟ್ಟುಕೊಳ್ಳಬಾರದು ಅಥವಾ ಜನರನ್ನು ಶೋಷಣೆ ಮಾಡಬಾರದೆಂಬುದಾಗಿ ಸತ್ಯವೇದ ನಮಗೆ ಹೇಳುತ್ತದೆ.

ಯಾಜಕಕಾಂಡ 19:13

**ಮತ್ತೊಬ್ಬನನ್ನು ಬಲಾತ್ಕರಿಸಬಾರದು ಅವನ ಸೊತ್ತನ್ನು ಅಪಹರಿಸಬಾರದು ಕೂಲಿಯವನ ಕೂಲಿಯನ್ನು ಮರುದಿನದವರೆಗೆ ನಿನ್ನ ಬಳಿಯಲ್ಲಿ ಇಟ್ಟುಕೊಳ್ಳಬಾರದು**

ನಿಮಗಾಗಿ ಜನರು ಕೆಲಸ ಮಾಡುತ್ತಿದ್ದರೆ ನಿಗದಿತ ಸಮಯದಲ್ಲಿ ಅವರಿಗೆ ಸಂಬಳ ನೀಡುವುದನ್ನು ಖಾತರಿ ಮಾಡಿಕೊಳ್ಳಬೇಕು. ಕೆಲವು ಸಮಯದವರೆಗೆ ಸಂಬಳಗಳನ್ನು ಕೊಡುವುದನ್ನು ಹಿಡಿದಿಟ್ಟುಕೊಳ್ಳಲೂ ''ಭಾರತದ ಕಂಪನಿ ಸಂಸ್ಕೃತಿ'' ಎಂಬುದಾಗಿ ನೀವು ಹೇಳಬಹುದು. ನಾವು ಆ ಸಂಸ್ಕೃತಿಗೆ ಸಂಬಂಧಪಟ್ಟವರಲ್ಲ ಆದರೆ ದೇವರ ರಾಜ್ಯದ ಸಂಸ್ಕೃತಿಯವರಾಗಿದ್ದೇವೆ ಎಂಬುದನ್ನು ನೆನಸಿಕೊಳ್ಳಬೇಕು. ಮತ್ತು ನಾವು ಕೂಲಿಗಾಗಿ ತೆಗೆದುಕೊಂಡ ವ್ಯಕ್ತಿಯ ಕೂಲಿಯನ್ನು ಹಿಡಿದಿಟ್ಟುಕೊಳ್ಳಬಾರದು ಎಂಬುದಾಗಿ ದೇವರು ಹೇಳುತ್ತಾನೆ. ನಿಮ್ಮ ನೌಕರರನ್ನು ಅವನ ಕೆಲಸವನು ಮಾಡಿದರೆ ಅವನಿಗೆ ಕೂಲಿ ಕೊಡಿರಿ.

ಯೆರೆಮೀಯ 22:13

**ತನ್ನ ಅರಮನೆಯನ್ನು ದುರ್ನೀತಿಯಿಂದಲೂ ಮಹಡಿಗಳನ್ನು ಅನ್ಯಾಯದಿಂದಲೂ ಕಟ್ಟಿಸಿಕೊಳ್ಳುವವನ ಗತಿಯನ್ನು ಏನು ಹೇಳಲಿ! ಕೂಲಿ ಕೊಡದೆ ನೆರೆಯವನಿಂದ ಬಿಟ್ಟಿ ಕೆಲಸವನ್ನು ಮಾಡಿಸಿ.**

ನಿಮ್ಮ ನೆರೆಹೊರೆಯವನ ಸೇವೆಗಳನ್ನು ಅವನು ಮಾಡಿದ ಕೆಲಸಕ್ಕೆ ಏನಾದರೂ ಕೊಡದೇ ಉಪಯೋಗಿಸಿಕೊಳ್ಳಬಾರದು. ಗೃಹಿಣಿಯರೇ, ನಿಮಗಾಗಿ ಮನೆಕೆಲಸದಾಕೆ ಕೆಲಸ ಮಾಡುತ್ತಿದ್ದರೆ ಸರಿಯಾದ ಸಮಯದಲ್ಲಿ ಅವರಿಗೆ ಸಂಬಳ ಪಾವತಿಸಿ. ವಿಭಿನ್ನರಾದವರಾಗಿರ್ರಿ:

ನಾನು ಜನರನ್ನು ಸಂದರ್ಶನ ಮಾಡುವಾಗ ಪ್ರಸ್ತುತವಾದ ಕೆಲಸವನ್ನು ಏಕೆ ಬಿಡುತ್ತಿದ್ದೀರಿ ಎಂಬುದಾಗಿ ಕೇಳುತ್ತೇನೆ. ಕೆಲವರು 6 ತಿಂಗಳುಗಳಿಂದ ಸಂಬಳ ಕೊಟ್ಟಿಲ್ಲವೆಂಬುದಾಗಿ ನನಗೆ ಹೇಳುತ್ತಾರೆ! ಸುಮಾರು 700 ಜನರಷ್ಟು ನೌಕರರನ್ನು ಹೊಂದಿರುವ ದೊಡ್ಡ ಕಂಪನಿಯ ಕೆಲಸಗಾರರು ಇವರಾಗಿದ್ದಾರೆ. ಅಂತಹ ಕೆಲಸದ ಸಂಸ್ಕೃತಿಯನ್ನು ದೇವರು ಅಂಗೀಕರಿಸುವುದಿಲ್ಲ.

ಬೆಂಗಳೂರಿನಲ್ಲಿ ಒಂದು ದೊಡ್ಡ ಸಾಫ್ಟ್‌ವೇರ್ ಕಂಪನಿಗೆ ದೊಡ್ಡ ಮೇಲ್ಹಾವಣಿಯನ್ನು ಹಾಕಲೂ ಒಬ್ಬ ಗುತ್ತಿಗೆದಾರನು ಆ ಕೆಲಸವನ್ನು ಮಾಡಲೂ ಲಕ್ಷಗಟ್ಟಲೇ ಹಣವನ್ನು ಬಂಡವಾಳವಾಗಿ ಹಾಕಿರುತ್ತಾನೆ ಆದಾಗ್ಯೂ ಎರಡು ವರ್ಷಗಳವರೆಗೂ ಅವನಿಗೆ ಅದು ಪಾವತಿಸಿರುವುದಿಲ್ಲ. ಬೆಳಕಿನ ಮಕ್ಕಳಾಗಿ ಮತ್ತು ಉದ್ಯೋಗದಾತರಾಗಿ, ನಮ್ಮ ಮಾತು ಮತ್ತು ನಡವಳಿಕೆಯಲ್ಲಿ ಜೀವಿತದ ಎಲ್ಲಾ ಕ್ಷೇತ್ರಗಳಲ್ಲಿಯು ನ್ಯಾಯಪರತೆ ಮತ್ತು ಪ್ರಾಮಾಣಿಕತೆಯನ್ನು ಪಾಲಿಸುವುದನ್ನು ಕಲಿಯಬೇಕು.

ಎಫೆಸದವರಿಗೆ 6:9

**ಯೂಜಮಾನರೇ ನಿಮ್ಮ ಕೈಕೆಳಗಿರುವ ದಾಸರ ವಿಷಯದಲ್ಲಿ ಅದೇ ರೀತಿಯಾಗಿ ನಡೆಯಿರಿ. ಪರಲೋಕದಲ್ಲಿ ನಿಮಗೂ ಅವರಿಗೂ ಯಜಮಾನನಾಗಿರುವಾತನು ಇದ್ದಾನೆಂತಲೂ ಆತನಲ್ಲಿ ಪಕ್ಷಪಾತವಿಲ್ಲವೆಂತಲೂ ತಿಳಿದು ನಿಮ್ಮ ದಾಸರನ್ನು ಬೆದರಿಸುವ ಪದ್ಧತಿಯನ್ನು ಬಿಟ್ಟು ಬಿಡಿರಿ.**

ಒಬ್ಬ ವ್ಯಕ್ತಿಯೊಂದಿಗಿನ ಒಂದು ಕೂಟದ ಸಮಯದಲ್ಲಿ ಏರ್ಪಡಿಸಿದವರ ನನಗೆ ಕಾಫಿಯನ್ನು ಕೊಟ್ಟರು ನಾನು ಅದನ್ನು ಪಡೆದುಕೊಂಡೆನು. ನಮ್ಮೊಂದಿಗಿದ್ದ ಇನ್ನೊಬ್ಬ ವ್ಯಕ್ತಿಯು ಬೆಳಗ್ಗಿನ ಉಪಹಾರವನ್ನು ತೆಗೆದುಕೊಂಡಿದ್ದರಿಂದ ಬೇಡ ಎಂಬುದಾಗಿ ಹೇಳಿದರು. ಏರ್ಪಡಿಸಿದವರನ್ನು ಉಪಹಾರ ತೆಗೆದುಕೊಳ್ಳಿರಿ ಎಂಬುದಾಗಿ ನಾನು ಕೇಳಿದಾಗ, ಅವರು ಉಪವಾಸ ಮಾಡುತ್ತಿರುವುದಾಗಿ ಹೇಳಿದರು. ಏರ್ಪಡಿಸಿದವರನ್ನು ಮೆಚ್ಚಿಸುವುದಕ್ಕಾಗಿ ಈಗಾಗಲೇ ಬೆಳಗ್ಗಿನ ಉಪಾಹಾರ ಮಾಡಿದ್ದೆನೆಂಬುದಾಗಿ ಹೇಳಿದಂತಹ ವ್ಯಕ್ತಿಯು ತಾನು ಸಹ ಉಪವಾಸ ಮಾಡುತ್ತಿರುವುದಾಗಿ ತಕ್ಷಣವೇ ಹೇಳಿದನು. ಕ್ರೈಸ್ತರಾದ ನಮ್ಮ ಮಧ್ಯದಲ್ಲಿ 'ಪ್ರಾಮಾಣಿಕತೆಯು' ಏನಾಗಿದೆಂಬುದಾಗಿ

ನಾನು ಆಶ್ಚರ್ಯಗೊಂಡೆನು. ನಾವು ಪ್ರಪಂಚದಿಂದ ವಿಭಿನ್ನವಾಗಿ ಇರಬೇಕು? ನಾವು ಬೆಳಕಿನ ಜನರಾಗಿ ಇರಬೇಕಲ್ಲವೇ? ದೇವರ ಆಲೋಚನೆಗಳು ಮತ್ತು ಮಾರ್ಗಗಳಿಗನುಸಾರವಾಗಿ ಜೀವಿಸುವಂತಹ ರೂಪಾಂತರಗೊಂಡಂತಹ ಪ್ರಪಂಚದ ಅನುವರ್ತಕರಾಗಿರಬೇಕಲ್ಲವೇ?

## ನಾವು ಶುದ್ಧೀಕರಣ ಮತ್ತು ನಮ್ರತೆಗೆ ಬದ್ಧತೆಯುಳ್ಳವರಾಗಿದ್ದೇವೆ

1 ಪೇತ್ರನು 2:11 ಅ

**ಶಾರೀರಿಕ ಅಭಿಲಾಷೆಗಳಿಗೆ ದೂರವಾಗಿರಬೇಕೆಂದು ನಿಮ್ಮನ್ನು ಎಚ್ಚರಿಸುತ್ತೇನೆ.**

ಶಾರೀರಿಕ ಅಭಿಲಾಷೆಗಳಿಂದ ದೂರವಾಗಿರ್ರಿ, ಕತ್ತಲೆಯೊಳಗಿಂದ ಆತನ ಅದ್ಭುತಕರವಾದ ಬೆಳಕಿನಡೆಗೆ ಕರೆದಾತನಿಗೆ ಸ್ತೋತ್ರಗಳನ್ನು ಸಾರುವಂತಹ ಜನರಾಗಿ ನಾವು ಶಾರೀರಿಕ ಅಭಿಲಾಷೆಗಳಿಂದ ದೂರವಿರಬೇಕು. ನಾವುಗಳು ಶುದ್ಧತೆ ಮತ್ತು ನಮ್ರತೆಗೆ ಬದ್ಧತೆಯುಳ್ಳವರಾಗಿರಬೇಕು.

## ಯುವತಿಯರು

ಕ್ರೈಸ್ತ ರಾಕ್ ಕಲಾವಿದೆಯಾದಂತಹ ಉತ್ತಮವಾಗಿ ಚಿರಪರಿಚಿತವಾದಂತಹ ರೆಬೆಕ್ಕಾ ಸ್ಟೆಂಟ್ ಜೇಮ್ಸ್ ಎಂಬ ಒಬ್ಬ ದೈವಿಕ ಯುವತಿಯು ಒಂದು ಉತ್ತಮ ಉದಾಹರಣೆಯಾಗಿದ್ದಾಳೆ. ಹದಿಹರೆಯದ ವಯಸ್ಸಿನವರು ಮತ್ತು ಇಪ್ಪತ್ತರ ಪ್ರಾಯದವರು ಕೇಳುವಂತಹ ಕ್ರೈಸ್ತ ಹಾಡುಗಳನ್ನು ಹಾಡುತ್ತಾರೆ. ಕುಟುಂಬ ಜೀವನ ಡಾಟ್ ಕಾಮ್‌ನಲ್ಲಿ ಏಮಿಗುಡ್‌ಮ್ಯಾನರವರೊಡನೆ ಒಂದು ಸಂದರ್ಶನದಲ್ಲಿ ''ನಮ್ರತೆಗೆ ಸಮರ್ಪಿಸಿಕೊಳ್ಳಲಾಗಿದೆ'' ಎಂಬ ವಿಷಯದ ಶೀರ್ಷಿಕೆಯನ್ನು ಆಕೆ ಮಾತಾನಾಡಿದರು. ಈ ಕೆಳಗಿನವುಗಳು ಆ ಒಂದು ಪ್ರಸಾರದಿಂದ ಆಯ್ದ ಭಾಗಗಳು:

ರೆಬೆಕ್ಕಾ ಹೇಳುತ್ತಾರೆ, ''ನಾನು ವಿಭಿನ್ನವಾದ ವಿಷಯಗಳಲ್ಲಿ ನನ್ನ ಸ್ವಂತ ಆಕರ್ಷಣೆಯ ಪ್ರಜ್ಞೆಯನ್ನು ಇರಿಸಿದ್ದೆನೆಂದು ನಾನು ಭಾವಿಸುತ್ತೇನೆ, ನಾನು ಧರಿಸಿಕೊಳ್ಳುವಂತಹ ವಿಧವಾದ ವಸ್ತುಗಳು ಒಂದು ನಿರ್ದಿಷ್ಟವಾದ ಬಗೆಯ ಒಬ್ಬ ಹುಡುಗನನ್ನು ಆಕರ್ಷಿಸುತ್ತದೆ ಎಂಬುದು ನಿಮಗೆ ತಿಳಿದಿದೆ ಮತ್ತು ಅಂತಿಮವಾಗಿ ನನ್ನ ಗಂಡನಾಗಿ ಹೊಂದಬೇಕೆಂಬುದಾಗಿ ನಾನು ಬಯಸುವ ಆ ಹುಡುಗನು ಶುದ್ಧತೆಗೆ ಬದ್ಧತೆಯುಳ್ಳ ಹುಡುಗನಾಗಿರಬೇಕು. ಅವನಿಗೆ ಶಾರೀರಿಕ ಅಭಿಲಾಷೆಗಳು ಬೇಕಾಗಿರುವುದಿಲ್ಲ. ನಾನು ಧರಿಸಿಕೊಳ್ಳುವಂತಹ ವಸ್ತ್ರಗಳಲ್ಲಿ ವ್ಯಾಮೋಹಕವಾದ

ರೀತಿಯಲ್ಲಿ ನಾನು ಧರಿಸಿಕೊಂಡಿದ್ದರೆ ಅದು ಸರಿ ಎಂಬುದಾಗಿ ಭಾವಿಸುವ ಒಬ್ಬ ಹುಡುಗನನ್ನು ನಾನು ಆಕರ್ಷಿಸುತ್ತೇನೆ, ಮತ್ತು ನಾನು ಅಶುದ್ಧಳೆಂದು ಇದು ಬಹುತೇಕವಾಗಿ ಹೇಳುತ್ತದೆ, ಆದರೆ ಅದು ಅವನಿಗೆ ಸರಿಯಾದುದಾಗಿರುತ್ತದೆ; ಆದರೆ ನಾನು ನಮ್ರತೆಯಿಂದ ಉಡುಪನ್ನು ಧರಿಸಿಕೊಂಡರೆ ಅದನ್ನು ಗೌರವಿಸುವಂತಹ ಮತ್ತು ಅದನ್ನು ಮೆಚ್ಚುವಂತಹ ಒಬ್ಬ ಹುಡುಗನನ್ನು ಆಕರ್ಷಿಸುತ್ತೇನೆ ಆದ್ದರಿಂದ ಆ ರೀತಿಯಾಗಿ ಉಡುಪನ್ನು ಧರಿಸುವುದು ನನಗೆ ಸರಿಯಾದುದಾಗಿದೆ.

ಆಕರ್ಷಕವಾದ, ತಂಪಾದ, ಆಧುನಿಕ ಬಟ್ಟೆಗಳನ್ನು ನಾನು ಧರಿಸಲೂ ಇಷ್ಟಪಡುತ್ತೇನೆ ಮತ್ತು ಅತಿಯಾಗಿ ಬಿಗಿಯಾಗಿರದ ಮತ್ತು ಅಧಿಕವಾಗಿ ಶರೀರವನ್ನು ತೋರಿಸದಿರದಂತಹ ಮತ್ತು ನಮ್ರವಾಗಿ ಕಾಣುವಂತಹ ವಸ್ತುಗಳನ್ನು ಇಷ್ಟಪಡುತ್ತೇನೆ. ಅದನ್ನು ಕಂಡುಹಿಡಿಯುವುದು ತುಂಬಾ ತುಂಬಾ ಕಷ್ಟ. ಆದರೆ ಇದು ಒಂದು ಉಪಯುಕ್ತ ಹೋರಾಟವಾಗಿದೆ ಯಾಕೆಂದರೆ ನಾನು ನಮ್ರತೆಯುಳ್ಳವಳಾಗಿದ್ದೇನೆ ಮತ್ತು ಇತರೆ ಯುವತಿಯರನ್ನು ತಪ್ಪು ಮಾಡುವ ವಿಷಯಗಳಿಗೆ ನಾನು ನಡೆಸುವುದಿಲ್ಲ ಅದರ ಜೊತೆಗೆ ಕ್ರಿಸ್ತನಲ್ಲಿ ನನ್ನ ಸಹೋದರನಿಗೆ ಶಾರೀರಿಕವಾಗಿ ಮತ್ತು ತಪ್ಪು ಮಾಡಿ ಬೀಳಲೂ ಕಾರಣವಾಗುವುದಿಲ್ಲ.

ನಿಮಗೆ ಗೊತ್ತಾ, ನಾನು ಅನೇಕ ಸಮಯಗಳಲ್ಲಿ ನಾನು ಸಾಮಾನ್ಯವಾಗಿ ಧರಿಸುವುದಕ್ಕಿಂತ ಸ್ವಲ್ಪ ಅಂಚಿನಲ್ಲಿದೆ ಎಂಬುದಾಗಿ ನನ್ನ ತಂದೆಗೆ ಅನ್ನಿಸಿದರೆ ''ಓಹೋ ಅದು ಒಬ್ಬ - ಹುಡುಗನನ್ನು ಪಡೆಯುವ ಉಡುಪು ಆಗಿದೆ'' ಎಂಬುದಾಗಿ ಹೇಳುತ್ತಿದ್ದರು. ಆದ್ದರಿಂದ ಅದರ ಬಗ್ಗೆ ನನ್ನೊಂದಿಗೆ ರೇಗಿಸುತ್ತಾರೆ ಆದರೆ ನನ್ನ ತಂದೆಗೆ ನಿಜವಾಗಿಯು ಬಹಳ ತೊಂದರೆಯೊಡನೆ ಇದೆ ಎಂಬುದಾಗಿ ಅನ್ನಿಸಿದಾಗ, ನನಗೆ ನೇರವಾಗಿ ಹೇಳುತ್ತಾರೆ. ಪುಟ್ಟ ಹುಡುಗಿ, ಪುಟ್ಟ ಮಗಳ ಭಾವನೆಯನ್ನು ಕೆಲವೊಮ್ಮೆ ತಂದೆಯು ಹೊಂದಿರುತ್ತಾರೆ ಎಂಬುದಾಗಿ ನಾನು ಯೋಚಿಸುತ್ತೇನೆ. ನಾನು ಧರಿಸಿಕೊಳ್ಳುವಂತಹ ಯಾವುದಾದರೂ ಸ್ವಲ್ಪ ಹೆಚ್ಚಾಗಿ ವಿಮರ್ಶಾತ್ಮಕವಾಗಿ ಮಾಡುತ್ತದೆಂಬುದು ನಿಮಗೆ ಗೊತ್ತು. ಅಮ್ಮ ಅವರೊಂದಿಗೆ ಸಮತೋಲನಗೊಳಿಸಿಕೊಳ್ಳುತ್ತಾರೆ. ಅವರಿಬ್ಬರ ನಡುವೆ, ನನ್ನ ಹದಿಹರೆಯ ವಯಸ್ಸಿನಲ್ಲಿ ವಿಶೇಷವಾಗಿ ಸಂಪ್ರದಾಯವಾದಿ ಕಡೆಗೆ, ಇದು ಒಂದು ಬದಿಗೆ ಸ್ವಲ್ಪ ಹೆಚ್ಚು ತಪ್ಪಾಗಿರುತಿತ್ತು. ಯಾವಾಗಲೂ ಅವರಿಬ್ಬರು ನನ್ನನ್ನು ಪ್ರೋತ್ಸಾಹಿಸಿದರು ಮತ್ತು ತುಂಬಾ ಬಿಗಿಯಾಗಿರದಂತಹ, ತುಂಬಾ ಚಿಕ್ಕದಾಗಿರಂತಹ ವಸ್ತುಗಳು, ತುಂಬಾ ಚಿಕ್ಕದಾಗಿ ಕಾಣಿಸುವಂತಹ ತುಂಡು ವಸ್ತ್ರಗಳು, ಲಂಗಗಳು ಮತ್ತು ದೇಹದ ಚರ್ಮ

ಭಾಗವನ್ನು ಅಧಿಕವಾಗಿ ತೋರಿಸದೇ ಇರುವಂತಹ ವಸ್ತ್ರಗಳನ್ನು ನನ್ನ ತಾಯಿಯು ಹೇಗೆ ಧರಿಸಿಕೊಂಡಿದ್ದಾಳೆಂಬುದನ್ನು ನಾನು ಭಾವಿಸಿಕೊಂಡಿದ್ದೇವೆ. ಸರಿಯಾದ ರೀತಿಯಲ್ಲಿ ಹೆಚ್ಚಾಗಿ ಹೋಗುವಂತದ್ದು ಇದು ಎಂಬುದು ಬಹಳ ಆಳವಾಗಿ ನನಗೆ ತಿಳಿದ ವಿಚಾರವಾಗಿತ್ತು ಮತ್ತು ಅದೇ ರೀತಿಯಾಗಿ ನಾನು ಸಹ ಜೀವಿಸಲೂ ಬಯಸಿದೆನು. ನನ್ನ ತಂದೆ ತಾಯಿಗೆ ಮೆಚ್ಚಿಗೆಯಾಗದಂತಹ ಯಾವುದನ್ನು ನಾನು ಮಾಡಲೂ ಅಪೇಕ್ಷಿಸುವುದಿಲ್ಲ ಮತ್ತು ದೇವರನ್ನು ಮೆಚ್ಚಿಸದಂತಹ ಅಥವಾ ಇತರ ಜನರಿಗೆ ನೋವು ತರುವಂತಹ ಬೇರೆ ಯಾವ ಕಾರ್ಯಗಳನ್ನು ನಾನು ಮಾಡಲೂ ಇಚ್ಚಿಸುವುದಿಲ್ಲ. ನಾನು ಸರಿಯಾಗಿರುವುದನ್ನೇ ಮಾಡಬೇಕೆಂಬ ಅಪೇಕ್ಷೆಯು ದೇವರ ಮುಂದೆ ನಾನು ಒಬ್ಬ ಕ್ರೈಸ್ತನಾಗಿ ನನ್ನ ಸ್ವಂತ ಜವಾಬ್ದಾರಿಯ ಪ್ರಶ್ನೆಯಾಗಿದೆ ಎಂಬುದಾಗಿ ನಾನು ಯೋಚಿಸುತ್ತೇನೆ.

ನಾನು ಸಂಗೀತವನ್ನು ಮೊದಲೂ ಪ್ರಾರಂಭಿಸಿದಾಗ, ಅಂಗಿಗಳು ''ಒಳಗಿನ'' ವಿಷಯಗಳಾಗಿದ್ದವು ಮತ್ತು ಅದು ಸರಿಯಾದುದು ಆಗಿತ್ತು ಯಾಕೆಂದರೆ ನಿಮ್ಮ ಅಂಗಿಗಳೊಡನೆ ನಿಜವಾಗಿ ನೀವು ನಮ್ರತೆಯುಳ್ಳವರಾಗಿರಬಹುದೆಂಬುದು ಬಹಳ ಆಸಕ್ತಿಕರವಾಗಿದೆ. ಅಂಗಿಗಳು ಈಗ ಬಹಳ ತಂಪಾಗಿಲ್ಲ ಎಂಬುದಾಗಿ ನಿಮಗೆ ತಿಳಿದಿದೆ. ಆಕರ್ಷಕ ಮೇಲ್ಭಾಗದ ವಸ್ತ್ರಗಳು ಅನೇಕ ಸಮಯಗಳಲ್ಲಿ ಇವು ಅಧಿಕವಾಗಿ ಶರೀರವನ್ನು ತೋರಿಸುವಂತಹ ಬಗೆಯವುಗಳಾಗಿರುತ್ತವೆ ಇವು ದೂರದರ್ಶನದಲ್ಲಿ (ಟಿ.ವಿ) ನೀವು ನೋಡುವಂತಹ ರೀತಿಯಲ್ಲಿರುತ್ತವೆ ಎಂಬುದು ನಿಮಗೆ ಗೊತ್ತಾ. ಅಂಗಡಿಗಳಲ್ಲಿ ನಮ್ರತೆಯಾಗಿರುವ ಮತ್ತು ಆಕರ್ಷಿತವಾಗಿರುವ ಮತ್ತು ತಂಪಾಗಿರುವ ವಸ್ತುಗಳನ್ನು ಗುರ್ತಿಸಲು ಪ್ರಯತ್ನಿಸುವುದು ಕಷ್ಟಕರವಾಗಿದೆ ಎಂಬುದು ನಿಮಗೆ ತಿಳಿದಿದೆ.

ನಾನು ವೇದಿಕೆಯ ಮೇಲೆ ಮತ್ತು ಹೊರಗೆ ನಾನು ಧರಿಸಿಕೊಳ್ಳುವ ವಸ್ತುಗಳ ಕುರಿತು ಇವೆರಡರಲ್ಲೂ ನಾನು ಕೆಲವು ಮಾರ್ಗಸೂಚಿಗಳನ್ನು ನಾನು ಉಪಯೋಗಿಸುತ್ತೇನೆ. ನಾನು ವೇದಿಕೆಯ ಮೇಲಿರುವಾಗ, ಸುತ್ತಲೂ ಓಡಾಡುವುದರಿಂದ ವಿಶೇಷವಾಗಿ ನಾನ್ಯ ಪ್ಯಾಂಟ್(ಪಯಜಾಮ) ಧರಿಸಿಕೊಳ್ಳುವುದರಲ್ಲಿ ನಾನು ಬಹಳ ಜಾಗರೂಕತೆ ವಹಿಸುತ್ತೇನೆ. ನಾನು ರಾಕ್ ಸಂಗೀತ ಹಾಡುವುದರಿಂದ ವಿಶೇಷವಾಗಿ ಲಂಗಗಳನ್ನು ಅಲ್ಲಿ ಹಾಕುವುದು ತುಂಬಾ ಕಷ್ಟಕರವಾಗಿರುತ್ತದೆ. ಪ್ರತಿಯೊಂದು ಅಂಗದ ತಿರುವುಗಳನ್ನು ತೋರಿಸುವ ಹಾಗೆ ಅತಿಯಾಗಿ ಬಿಗಿಯಾಗಿರುವ ವಸ್ತ್ರಗಳನ್ನು ನಾನು ಧರಿಸದಿರುವಂತದ್ದನ್ನು ನಾನು ಖಚಿತಪಡಿಸಿಕೊಂಡಿದ್ದೇನೆ. ನಾನು ಧರಿಸಿಕೊಂಡಿರುವ

ದೇಹದ ಮೇಲ್ಭಾಗದ ವಸ್ತ್ರವು ಅದು ಇರುವಂತಹ ರೀತಿಯಲ್ಲಿ ನಾನು ಧರಿಸಿದರೆ ಅದು ತುಂಬಾ ತುಂಬಾ ಬಿಗಿಯಾಗಿರುತ್ತದೆ ಆದರೆ ನಾನು ಅದರ ಕೆಳಗೆ ಎರಡು ಅಂಗಿಗಳನ್ನು ಹಾಕಿದ್ದೇನೆ. ಆದ್ದರಿಂದ ಇದು ಸಹ ಸೂಕ್ತವಾದುದಲ್ಲ ಅದು ಒಬ್ಬ ಹುಡುಗನನ್ನು ಒಂದು ಕೆಟ್ಟ ಮಾರ್ಗಕ್ಕೆ ನಿಜವಾಗಿ ಸೆಳೆಯುವಂತದ್ದಾಗಿರುತ್ತದೆ. ಅದು ಮಾಡುತ್ತದೆ. ಕೆಲವು ವರ್ಷಗಳ ಹಿಂದೆ ನಮ್ಮ ಯೌವನಸ್ಥರ ಗುಂಪಿನಲ್ಲಿರುವ ಹುಡುಗಿಯರೊಂದಿಗೆ ಸಂದೇಶ ಹಂಚಲೂ ನಮ್ಮ ಸಭೆಯಲ್ಲಿ ಒಬ್ಬ ಸಂದೇಶಕರನ್ನು ಕರೆಸಲಾಗಿತ್ತು. ''ಅವರು ಎಲ್ಲಿ ನೋಡಬೇಕೆಂಬುದಾಗಿ ಗೊತ್ತಿಲ್ಲ ಎಂಬುದಾಗಿ ದೂರು ಹೇಳುವವರಾದ ಹುಡುಗರು ಯೌವನಸ್ಥರ ಗುಂಪಿಗೆ ಬಂದಿದ್ದಾರೆ'' ಎಂಬುದಾಗಿ ಒಬ್ಬಾಕೆ ಹೇಳಿದಳು. ಅವರು ದೇವರನ್ನು ಆರಾಧಿಸಲು ಮತ್ತು ಆತನಿಗೆ ಸಮೀಪಗೊಳ್ಳಲೂ ಬಂದಿದ್ದಾರೆ. ಅವರು ಬಹಳ ಬಿಗಿಯಾದ ಬಟ್ಟೆಗಳನ್ನು ಧರಿಸಿರುವ ಹುಡುಗಿಯರಿದ್ದಾರೆ ಮತ್ತು ಅವರು ಎಲ್ಲಿ ನೋಡಬೇಕೆಂಬುದಾಗಿ ಅವರಿಗೆ ಗೊತ್ತಿಲ್ಲ. ಇದು ಒಂದು ದಿಕ್ಕು ತಪ್ಪಿಸುವಂತದ್ದಾಗಿದೆ. ನಮ್ರತೆಯು ತುಂಬಾ ಅತ್ಯಾವಶ್ಯಕ. ಅನೇಕ ಯುವತಿಯರಿಗೆ ಅವರು ಹೀಗೆ ಬಟ್ಟೆಧರಿಸುತ್ತಾರೆಂಬುದರ ಬಲ ಮತ್ತು ಅದು ಕರ್ತನಲ್ಲಿ ಒಬ್ಬ ಸಹೋದರನಾದ ಹುಡುಗರ ಮೇಲೆ ಹೇಗೆ ಪ್ರಭಾವ ಬೀರುತ್ತದೆ ಎಂಬುದನು ಅರ್ಥಮಾಡಿಕೊಳ್ಳುವುದಿಲ್ಲ.

ಈ ಒಂದು ಆಯ್ದುಭಾಗದಿಂದ ಒಂದು ಮುಖ್ಯವಾದ ಹೇಳಿಕೆಯನ್ನು ನೋಡೋಣ. ರೆಬೆಕ್ಕಾರವರು ಧರಿಸುವಂತಹ ಬಗೆಯ ವಸ್ತುಗಳು ''ನಿಶ್ಚಿತ ಬಗೆಯ'' ಹುಡುಗರನ್ನು ಸೆಳೆಯುತ್ತದೆ ಎಂಬುದಾಗಿ ಹೇಳಿದ್ದಾರೆ. ಯೌವನಸ್ಥರಾದ ಸ್ತ್ರೀಯರೇ, ನಿಮ್ಮ ಬಟ್ಟೆಗಳ ವ್ಯಾಮೋಹಕವಾಗಿದ್ದರೆ ಅಂತಹ ವಿಧದ ಯುವಕರನ್ನು ಆಕರ್ಷಣೆ ಮಾಡುತ್ತದೆ. ಅಂತಹ ವಿಧವಾದ ಯುವಕನು ನಿಮ್ಮ ಗಂಡನಾಗಲೂ ಬಯಸುತ್ತೀರಾ? ನಿಮ್ಮಲ್ಲಿ ಅನೇಕರು ಇನ್ನೂ ಖಚಿತವಾಗಿಲ್ಲ. ರೆಬೆಕ್ಕಾ ಹೇಳುವಂತದ್ದು ತುಂಬಾ ಗ್ರಹಿಕೆಗೆ ಸಮರ್ಥವಾದದು. ಯಾರಾದರೂ ಉತ್ತಮವಾಗಿ ಮತ್ತು ಸಭ್ಯವಾಗಿ ಕಾಣುವ ಬಟ್ಟೆಯನ್ನು ಧರಿಸಬೇಕೆಂದು ಬಯಸಿದರೆ ಅದು ರೆಬೆಕ್ಕಾ ಸಂತ ಜೇಮ್ಸ್‌ರಂತಿರಬೇಕು. ಆಕೆಯು ಸಾವಿರಾರು ಜನರ ಮುಂದೆ ವೇದಿಕೆಯಲ್ಲಿ ಹಾಡು ಹಾಡುತ್ತಾರೆ. ಅನೇಕ ಧ್ವನಿಸುರುಳಿಗಳನ್ನು ನಿರ್ಮಾಣ ಮಾಡಿದ್ದಾರೆ. ಇನ್ನೂ ಮುಂತಾದವು. ದೊಡ್ಡದಾದ ಗುಂಪಿನವರನ್ನು ಆಕರ್ಷಿಸಲು ಉತ್ತಮವಾದ ಸಭ್ಯವಾದ ಬಟ್ಟೆಗಳನ್ನು ಧರಿಸಲೂ ನಿಶ್ಚಯವಾಗಿ ಆಕೆ ಇಷ್ಟಪಡುತ್ತಾರೆ ಎಂಬುದು ಖಚಿತವಾದ ವಿಷಯ ಬದಲಿಗೆ ''ನಾನು ಬಟ್ಟೆಧರಿಸುವ ರೀತಿ ತುಂಬಾ ಪ್ರಾಮುಖ್ಯ ಅದು ನಮ್ರತೆಯಿಂದಿರಬೇಕು ಯಾಕೆಂದರೆ ಇತರೆ ಯೌವನಸ್ಥ ಹುಡುಗಿಯರನ್ನು ದಾರಿ ತಪ್ಪಿಸುವ ಕಡೆಗೆ ನಡೆಸುವುದು

ನನಗೆ ಇಷ್ಟವಿಲ್ಲ'' ಮತ್ತು ಕ್ರಿಸ್ತನಲ್ಲಿ ನನ್ನ ಸಹೋದರರು ಶರೀರದಾಶೆ ಮತ್ತು ಬಿದ್ದು ಹೋಗುವುದು ನನಗೆ ಇಷ್ಟವಿಲ್ಲ'' ಎಂಬುದಾಗಿ ಆಕೆ ಹೇಳುತ್ತಾರೆ. ಆಕೆಯು ಒಬ್ಬ ಕ್ರೈಸ್ತಳಾಗಿ ತನ್ನ ನಿಲುವನ್ನು ಬಹಳ ಸೂಕ್ತವಾಗಿ ಮಾಡಿದ್ದಾರೆ.

ಯೌವ್ವನಸ್ಥ ಸ್ತ್ರೀಯರೇ, ನೀವು ಲೋಕದಲ್ಲಿರುವ ಇತರೆ ಸ್ತ್ರೀಯರಿಗಿಂತ ಶುದ್ಧತೆ ಮತ್ತು ನಮ್ರತೆಗೆ ಬದ್ಧತೆಯುಳ್ಳವವರಾಗಿ ವಿಭಿನ್ನವಾಗಿರಬೇಕು. ನಿಮ್ಮ ಸ್ನೇಹಿತರ ವಲಯದಲ್ಲಿ ಅಂದವಿಲ್ಲದ ಬಾತುಕೋಳಿಯಂತೆ ಕಾಣಿಸುತ್ತದೆಂಬುದಾಗಿ ಅದು ನಿಮಗೆ ಅನಿಸುವಂತೆ ಮಾಡಬಹುದು ಆದರೆ ಅಂತರಾತ್ಮದಲ್ಲಿರುವ ಸೌಂದರ್ಯವನ್ನು ದೇವರು ನೋಡುತ್ತಾನೆ ಎಂಬುದಾಗಿ ಸತ್ಯವೇದವು ಹೇಳುತ್ತದೆ.

1ಪೇತ್ರನು 3:3,4

**ನೀವು ನಿರ್ಮಲರಾಗಿಯೂ ಭಯಭರಿತರಾಗಿಯೂ ನಡೆದುಕೊಳ್ಳುವುದನ್ನು ಅವರು ನೋಡಿ ವಾಕ್ಯೋಪದೇಶವಿಲ್ಲದೆ ತಮ್ಮ ಹೆಂಡತಿಯರಾದ ನಿಮ್ಮ ನಡತೆಯಿಂದಲೇ ಸನ್ಮಾರ್ಗಕ್ಕೆ ಬಂದಾರು ಜಡೆಹೆಣೆದುಕೊಳ್ಳುವುದು ಚಿನ್ನದ ಒಡವೆಗಳನ್ನು ಇಟ್ಟುಕೊಳ್ಳುವುದು ವಸ್ತ್ರಗಳನ್ನು ಧರಿಸಿಕೊಳ್ಳುವುದು ಈ ಮೊದಲಾದ ಹೊರಗಣ ಶೃಂಗಾರವೇ ನಿಮ್ಮ ಅಲಂಕಾರವಾಗಿರಬಾರದು.**

ನೀವು ದೇವರ ಸೃಷ್ಟಿಯಲ್ಲಿ ಅಥವಾ ಮನುಷ್ಯನ ದೃಷ್ಟಿಯಲ್ಲಿ ಸುಂದರವಾಗಿ ಕಾಣಿಸಬೇಕೆಂಬುದಾಗಿ ನೀವು ಇಚ್ಛಿಸುತ್ತೀರಾ? ನಿಮ್ಮ ಆಯ್ಕೆಯನ್ನು ಮಾಡಿರಿ!

1 ತಿಮೊಥೆಯನಿಗೆ 2:8–10

**ಹೀಗಿರಲಾಗಿ ಪುರುಷರು ಎಲ್ಲಾ ಸ್ಥಳಗಳಲ್ಲಿ ಕೋಪವೂ ವಾಗ್ವಾದವೂ ಇಲ್ಲದವರಾಗಿ ಭಕ್ತಿ ಪೂರ್ವಕವಾಗಿಯೇ ಕೈಗಳನ್ನೆತ್ತಿ ಪ್ರಾರ್ಥಿಸಬೇಕೆಂದು ಅಪೇಕ್ಷಿಸುತ್ತೇನೆ. ಹಾಗೆಯೇ ಸ್ತ್ರೀಯರು ಮಾನಸ್ಥೆಯರಾಗಿಯೂ ಡಂಭವಿಲ್ಲದವರಾಗಿಯೂ ಇದ್ದು ಮರ್ಯಾದೆಗೆ ತಕ್ಕ ಉಡುಪನ್ನಿಟ್ಟುಕೊಳ್ಳಬೇಕೆಂದು ಅಪೇಕ್ಷಿಸುತ್ತೇನೆ. ಅವರು ಜಡೆ ಚಿನ್ನ ಮತ್ತು ಬೆಲೆಯುಳ್ಳ ವಸ್ತ್ರ ಮುಂತಾದವುಗಳಿಂದ ತಮ್ಮನ್ನು ಅಲಂಕರಿಸಿಕೊಳ್ಳದೆ ದೇವಭಕ್ತಿಯರೆನಿಸಿಕೊಳ್ಳುವ ಸ್ತ್ರೀಯರಿಗೆ ಯುಕ್ತವಾಗಿರುವ ಪ್ರಕಾರ ಸತ್ಕ್ರಿಯೆಗಳಿಂದಲೇ ಅಲಂಕರಿಸಿಕೊಳ್ಳಬೇಕು.**

ಒಂದು ಪ್ರಾರ್ಥನಾ ಕೂಟದಲ್ಲಿ ಪುರುಷರ ತಮ್ಮ ಪವಿತ್ರವಾದ ಕೈಗಳನ್ನು ಎತ್ತಿ ಪರಲೋಕದ ಕಡೆಗೆ ನೋಡುವುದನ್ನು ಪೌಲನೂ ವಾಖ್ಯಾನಿಸುತ್ತಾನೆ ಮತ್ತು ತಕ್ಷಣವೇ ವಿಷಯಾಂಶವನ್ನು ''ಹಾಗೆಯೇ ಸ್ತ್ರೀಯರು ಮಾನಸ್ಥೆಯರಾಗಿ ತಮ್ಮನ್ನು ಅಲಂಕರಿಸಿಕೊಳ್ಳಿರಿ'' ಎಂಬುದಾಗಿ ಹೇಳುತ್ತಾನೆ. ಸ್ತ್ರೀಯರು ಬಟ್ಟೆ ಧರಿಸುವುದನ್ನು ಏಕೆ ತಿಳಿಸುತ್ತಿದ್ದಾನೆ?

ಇಂದಿನ ದಿನದಲ್ಲಿ ನಾವು ಹೊಂದಿರುವ ಅದೇ ತೊಂದರೆಯನ್ನು ಅವರು ಸಹ

ಹೊಂದಿದ್ದರು ಎಂಬುದಾಗಿ ನಾನು ಶಂಕಿಸುತ್ತೇನೆ. ಪುರುಷರು ತಮ್ಮ ಪವಿತ್ರವಾದ ಕೈಗಳನ್ನು ಎತ್ತಿ ದೇವರನ್ನು ನೋಡುವ ತಮ್ಮ ಉತ್ತಮ ಕಾರ್ಯ ಮಾಡುತ್ತಿದ್ದರು ಆದರೆ ಏನೋ ಅವರ ಗಮನವನ್ನು ಸೆಳೆದು ಅವರನ್ನು ಕೆಳಗೆ ಎಳೆಯುತ್ತಿತ್ತು. ಅದಕ್ಕೆ ಪೌಲನು ಅಲ್ಲಿ ಪ್ರಾರ್ಥನೆ ಮಾಡುತ್ತಿದ್ದ ಸ್ತ್ರೀಯರಿಗೆ ಸಭ್ಯತೆಯಿಂದ ಮತ್ತು ಸಂಯಮದೊಡನೆ ಮಾನಸ್ಥೆಯರಾಗಿ ಅವರನ್ನು ಅಲಂಕರಿಸಿಕೊಳ್ಳಬೇಕೆಂದು ಉಪದೇಶಿಸುತ್ತಾನೆ. ಜಡೆ ಹಾಕುವುದು ಅಥವಾ ಚಿನ್ನ ಅಥವಾ ಮುತ್ತು ಅಥವಾ ಬೆಲೆಯುಳ್ಳ ವಸ್ತ್ರಗಳಿಂದ ಅಲಂಕರಿಸಿಕೊಳ್ಳದೆ ಉತ್ತಮ ಕ್ರಿಯೆಗಳೊಡನೆ ದೈವಭಕ್ತಿ ವ್ಯಕ್ತಪಡಿಸುವುದು ಸ್ತ್ರೀಯರಿಗೆ ಸೂಕ್ತವಾಗಿದೆ ಎಂದು ಹೇಳುತ್ತದೆ. ಯೌವ್ವನಸ್ಥ ಸ್ತ್ರೀಯರೇ, ಪೂಜ್ಯತೆಯನ್ನು ತೋರಿಸುವ ಹಾಗೇ ಸಮಚಿತ್ತತೆಯಲ್ಲಿ ಬಟ್ಟೆಧರಿಸಿರಿ ಅದು ವಿವೇಚನಾಯುಕ್ತವಾದದ್ದು ನೀವು ಸ್ವಯಂ-ನಿಯಂತ್ರಣ ಹೊಂದಿದ್ದೀರಿ ಎಂಬುದನ್ನು ತೋರಿಸುತ್ತದೆ. ಕ್ರೈಸ್ತರಾದ ಸ್ತ್ರೀಯರು ದೈವಭಕ್ತಿಯನ್ನು ತೋರಿಸುವಂತಹ ಮತ್ತು ಸಾರುವಂತಹ ರೀತಿಯಲ್ಲಿ ವಸ್ತ್ರಗಳನ್ನು ಧರಿಸಬೇಕೆಂಬ ಗುಣಮಟ್ಟವನ್ನು ಪೌಲನು ಹೇಳಿದ್ದಾನೆ ಆಮೆನ್!

ನೀವು ಹೇಗೆ ಬಟ್ಟೆಗಳನ್ನು ಆರಿಸಿಕೊಳ್ಳುತ್ತೀರಿ? ಇಂತಹ ವಿಚಾರಗಳ ಕುರಿತು ಯೋಚಿಸಿರಿ. ಇದು ದೈವಭಕ್ತಿಯನ್ನು ಸಾರುತ್ತದೆಯಾ? ಇದು ದೇವರ-ಸ್ವರೂಪವನ್ನು ಸಾರುತ್ತದೆಯಾ? ಇದು ದೈವಭಕ್ತಿ ಶ್ರದ್ಧೆಯನ್ನು ಸಾರುತ್ತದೆಯಾ? ಇದು ದೇವರಿಗೆ ಭಕ್ತಿಯನ್ನು ತೋರಿಸುತ್ತದೆಯಾ? ಇದು ನಿಮ್ಮ ಧರಿಸುವಿಕೆಯ ಆಯ್ಕೆಯನ್ನು ನಿಶ್ಚಯಿಸುತ್ತದೆ.

## ತಂದೆತಾಯಿ

ರೆಬೆಕ್ಕಾಳ ಜೀವಿತದ ಮೇಲೆ ಆಕೆಯ ತಂದೆ ತಾಯಿ ಬೀರಿದ ಪ್ರಭಾವವನ್ನು ನೋಡಿರಿ. ಆಕೆಯು ಒಬ್ಬ ಪ್ರಖ್ಯಾತಿಯುಳ್ಳವಳು. ಆದಾಗ್ಯೂ ಆಕೆಯು ಯಾವ ರೀತಿ ಜೀವಿಸಬೇಕು ಮತ್ತು ಯಾವ ರೀತಿಯಲ್ಲಿ ನಡೆಯಬೇಕೆಂಬುದರ ಮೇಲೆ ಪ್ರಭಾವ ಬೀರಿದ್ದರು. ತಂದೆ ತಾಯಂದಿರೆ! ಹದಿಹರೆಯ ಮತ್ತು ಇಪ್ಪತ್ತರ ವಯಸ್ಸಿನಲ್ಲಿರುವ ನಿಮ್ಮ ಮಕ್ಕಳಿಗೆ ನೀವು ಮಾತಾನಾಡುವುದು ಅಗತ್ಯವಾಗಿದೆ. ನಿಮ್ಮ ಮಕ್ಕಳನ್ನು ಸಭೆಗೆ ಕಳುಹಿಸುತ್ತೇವೆ ಮತ್ತು ಸಭಾಪಾಲಕರು ಇಂತಹ ಸಮಸ್ಯೆಗಳ ಕುರಿತು ಅವರಿಗೆ ಪ್ರವಚನ ಪೀಠದಿಂದ ಹೇಳುತ್ತಾರೆ ಎಂಬ ನಿರೀಕ್ಷೆಯೊಡನೆ ನಿಮ್ಮ ಜವಾಬ್ದಾರಿಯನ್ನು ತಪ್ಪಿಸಿಕೊಳ್ಳಬೇಡಿ.

## ವಯಸ್ಸಾದ ಸ್ತ್ರೀಯರು

ತೀತನು 2:4,5

**ಇದಲ್ಲದೆ ಅವರು ಪ್ರಾಯದ ಸ್ತ್ರೀಯರಿಗೆ ನಿಮ್ಮ ಮೂಲಕ ದೇವರ ವಾಕ್ಯಕ್ಕೆ ದೋಷಣೆಯಾಗದಂತೆ ನೀವು ಗಂಡಂದಿರನ್ನೂ ಮಕ್ಕಳನ್ನೂ ಪ್ರೀತಿಸುವವರೂ ದಮೆಯುಳ್ಳವರೂ ಪತಿವ್ರತೆರು ಮನೆಯಲ್ಲೇ ಕೆಲಸ ಮಾಡುವವರೂ ಸುಶೀಲೆಯರೂ ನಿಮ್ಮ ಗಂಡಂದಿರಿಗೆ ಅಧೀನರೂ ಆಗಿರಬೇಕೆಂದು ಬುದ್ಧಿ ಕಲಿಸುವ ಹಾಗೆ ಬೋಧಿಸು.**

ಹಿರಿಯ ಸ್ತ್ರೀಯರು ಪ್ರಾಯದ ಸ್ತ್ರೀಯರಿಗೆ ಪತಿವ್ರತೆಯರೂ ಮತ್ತು ಸುಶೀಲೆಯರೂ ಆಗಿರಬೇಕೆಂದು ಉಪದೇಶಿಸಬೇಕೆಂದು ಪೌಲನು ಕೇಳಿಕೊಳ್ಳುತ್ತಾನೆ. ''ಪತಿವ್ರತೆಯರೂ ಮತ್ತು ಸುಶೀಲೆಯರಾಗಿರುವುದು'' ಎಂಬುದರ ಅರ್ಥವು ಸಂಯಮ, ಸದ್ಗುಣ, ನಿರ್ಮಲ, ಮುಗ್ಧ ಮತ್ತು ಶುದ್ಧವಾಗಿರುವುದಾಗಿದೆ ಇದು ದೇವರ ಗುಣಮಟ್ಟ.

ಪ್ರಾಯದ ಸ್ತ್ರೀಯರು, ಅವರ ಸ್ನೇಹಿತೆಯರು ಮತ್ತು ಬೇರೆಯವರು ವಸ್ತ್ರ ಧರಿಸುವುದರಿಂದ ತಮ್ಮ ಶರೀರವನ್ನು ಅಧಿಕವಾಗಿ ತೋರಿಸುವಂತಹ ರೀತಿಯಲ್ಲಿ ವಸ್ತ್ರ ಧರಿಸುತ್ತಾರೆ, ನಾನೊಬ್ಬಳೇ ಮಾತ್ರ ಏಕೆ ನಮ್ರತೆಯುಳ್ಳ ಬಟ್ಟೆಗಳನ್ನು ಧರಿಸಿಕೊಳ್ಳಬೇಕು ಎಂಬುದಾಗಿ ವಾದ ಮಾಡುತ್ತಾರೆ. ಅಂತಹ ಬಟ್ಟೆ ಧರಿಸುವುದರಿಂದ ಪುರುಷರು ತೊಂದರೆಗೆ ಒಳಗಾದರೆ ಅದು ಅವರಿಗೆ ಬಿಟ್ಟಿದ್ದು, ಇದು ಕೇವಲ ಅವರ ತೊಂದರೆ ಮಾತ್ರವೇ. ನಿಜವಾಗಿಯೂ ಅಲ್ಲ!! ಪ್ರಾಯದ ಸ್ತ್ರೀಯರು ಯಾವ ರೀತಿಯಲ್ಲಿ ಬಟ್ಟೆ ಧರಿಸುತ್ತಾರೋ ಅಂತಹ ಬಗೆಯ ಹುಡುಗನ್ನು ಆಕರ್ಷಿಸುತ್ತಾರೆ ಎಂಬುದನ್ನು ಉಪದೇಶಿಸಬೇಕು. ಆದ್ದರಿಂದ ಇದು ಅವರ ಸಮಸ್ಯೆಯು ಆಗಬಹುದು. ಸ್ತ್ರೀಯರು ವ್ಯಾಮೋಹಕ ರೀತಿಯಲ್ಲಿ ಬಟ್ಟೆಗಳನ್ನು ಧರಿಸಬಾರದು. ದೈವಿಕತೆಯನ್ನು ತೋರಿಸುವ ರೀತಿಯಲ್ಲಿ ಮತ್ತು ಒಂದು ನಮ್ರತೆಯಿಂದ ವಸ್ತ್ರಗಳನ್ನು ಧರಿಸಬೇಕು. ಯಾಕೆಂದರೆ ಅವರು ಬೆಳಕಿನ ಪುತ್ರಿಯರಾಗಿದ್ದಾರೆ. ನಾವುಗಳು ಅಡಚಣೆಗಳು ಆಗಬಾರದೆಂಬುದಾಗಿ ದೇವರ ವಾಕ್ಯ ಹೇಳುತ್ತದೆ ಆದ್ದರಿಂದ ಹಿರಿಯ ಸ್ತ್ರೀಯರು ಪ್ರಾಯದ ಸ್ತ್ರೀಯರಿಗೆ ಹೀಗೆ ಆಗುವುದಕ್ಕಾಗಿ ತರಬೇತಿ ನೀಡಬೇಕು.

## ಯೌವ್ವನಸ್ಥ ಪುರುಷ

1 ಥೆಸಲೋನಿಕದವರಿಗೆ 4:3–5

**ದೇವರ ಚಿತ್ತವೇನೆಂದರೆ ನೀವು ಶುದ್ಧರಾಗಿ ಇರಬೇಕೆಂಬುದೇ ಆದ್ದರಿಂದ ಹಾದರಕ್ಕೆ ದೂರವಾಗಿರಬೇಕು. ದೇವರನ್ನರಿಯದ ಅನ್ಯಜನಗಳಂತೆ ಕಾಮಾಭಿಲಾಷೆಗೆ ಒಳಪಡದೆ ನಿಮ್ಮಲ್ಲಿ ಪ್ರತಿಯೊಬ್ಬನು ಪವಿತ್ರವಾದ ಮನಸ್ಸಿನಿಂದಲೂ ಘನತೆಯಿಂದಲೂ ಧರ್ಮಪತ್ನಿಯನ್ನು ಸಂಪಾದಿಸಿಕೊಳ್ಳಲೂ ತಿಳಿಯಬೇಕು.**

ದೇವರು ನಮ್ಮನ್ನು ಅನೈತಿಕರಾಗಿರಬೇಕೆಂಬುದಾಗಿ ಕರೆದಿಲ್ಲ ಆದರೆ ಪರಿಶುದ್ಧರಾಗಿರಲೂ ಕರೆದಿದ್ದಾನೆ. ''ನೀವು ಶುದ್ಧರಾಗಿ ಇರಬೇಕೆಂಬುದೇ ದೇವರ ಚಿತ್ತವಾಗಿದೆ'' – ನೀವು ದೇವರಿಗಾಗಿ ಪ್ರತ್ಯೇಕಿಸಲ್ಪಟ್ಟಿದ್ದೀರಿ. ಯೌವ್ವನಸ್ಥ ಪುರುಷರು ಎದುರಿಸುವ ದೊಡ್ಡದಾದ ಸವಾಲು ಏನೆಂದರೆ ಕಣ್ಣೀನಾಶೆಯಾಗಿದೆ.

2 ಥೆಸಲೋನಿಕದವರಿಗೆ 5:22
**ಸಕಲವಿಧವಾದ ಕೆಟ್ಟತನಕ್ಕೆ ದೂರವಾಗಿರಿ**

ದುರಾತ್ಮನ ಎಲ್ಲಾ ಗೋಚರತೆಗಳಿಂದ ದೂರವಾಗಿರ್ರಿ. ಉದಾಹರಣೆಗೆ ಬೆಂಗಳೂರಿನ ರಸ್ತೆ ಬೀದಿಗಳಲ್ಲಿ ಚಾಲನೆ ಮಾಡುವುದು ತುಂಬಾ ಕಷ್ಟಕರವಾಗಿದೆ ಎಂಬುದನ್ನು ನಾನು ಒಪ್ಪಿಕೊಳ್ಳುತ್ತೇನೆ.

ನಿಮ್ಮ ಕಾರನ್ನು ಚಾಲನೆ ಮಾಡುವಾಗ ನಿಮ್ಮ ಕಾರಿನಲ್ಲಿ ಆತ್ಮಿಕವಾದ ಪರಿಸರ ಒದಗಿಸಲೂ ಸ್ತುತಿ ಮತ್ತು ಆರಾಧನೆ ಹಾಡುಗಳನ್ನು ಕೇಳಿಸಿಕೊಳ್ಳುವುದರಿಂದ ದೇವರೊಂದಿಗೆ ಸಂಬಂಧ ಹೊಂದಬಹುದು ಆದರೆ ನೀವು ವಾಹನ ಚಾಲನೆ ಮಾಡುವಾಗ ರಸ್ತೆ ಬದಿಯಲ್ಲಿ ಒಂದು ಚಿಕ್ಕ ಕಾರಿನೊಡನೆ ತುಂಡು ಬಟ್ಟೆಗಳನ್ನು ಧರಿಸಿಕೊಂಡು ನಿಂತಿರುವ ಸ್ತ್ರೀಯ ಒಂದು ದೊಡ್ಡದಾಗ ಜಾಹೀರಾತು ಫಲಕಗಳನ್ನು ನೋಡುತ್ತೀರಿ. ಅವರು ಕಾರು ಅಥವಾ ಆ ಸ್ತ್ರೀಯನ್ನು ಮಾರಾಟ ಮಾಡುತ್ತಿದ್ದಾರಾ ಎಂಬುದಾಗಿ ನೀವು ಆಶ್ಚರ್ಯಗೊಳ್ಳುತ್ತೀರಿ. ಆದಾಗ್ಯೂ ನಿಮ್ಮ ಮುಂದೆ ಹೋಗುತ್ತಿರುವ ಬಸ್ಸಿಗೆ ಗುದ್ದುವ ಭಯದಲ್ಲಿ ನಿಮ್ಮ ಕಣ್ಣುಗಳನ್ನು ಮುಚ್ಚಿಕೊಳ್ಳುವ ಧೈರ್ಯವಿಲ್ಲ.

ನಮ್ಮ ಬೆಳಗ್ಗಿನ ವಾರ್ತಾ ಪತ್ರಿಕೆಗಳನ್ನು ಅದರ ಮುಖ್ಯ ಶೀರ್ಷಿಕೆಯ ಮುಖ್ಯಾಂಶಗಳನ್ನು ನೋಡುವುದಿಲ್ಲ. ಆದರೆ ಪ್ರತಿಯೊಂದು ಪುಟದಲ್ಲಿಯು ತುಂಡು ತುಂಡು ಬಟ್ಟೆಗಳನ್ನು ಹಾಕಿಕೊಂಡಿರುವ ಸ್ತ್ರೀಯರನ್ನು ನೋಡುತ್ತೇವೆ. ಆದ್ದರಿಂದ ನಮ್ಮ ವಾರ್ಷಿಕ ಚಂದಾದಾರಿಕೆಯನ್ನು ಇನ್ನೊಂದು ಪತ್ರಿಕೆಯ ಮೇಲೆ ಆ ಪತ್ರಿಕೆಯವರು ಇತರೆ ಪತ್ರಿಕೆಗಳಂತೆ ಮುಂದುವರೆಯುತ್ತಿದ್ದೀರಾ ಎಂಬುದನ್ನು ನೋಡಲೂ ಪ್ರಯತ್ನಿಸುತ್ತೇವೆ. ಆದ್ದರಿಂದ ವಾರ್ತಾ ಪತ್ರಿಕೆಗಳಿಗೆ ಚಂದಾದಾರರಾಗುವುದನ್ನು ನಿಲ್ಲಿಸುತ್ತೇವೆ ಮತ್ತು ಅಂತರ್ಜಾಲದಲ್ಲಿ (ಇಂಟರ್‌ನೆಟ್) ವಾರ್ತೆಗಳನು ಓದಲೂ ತೀರ್ಮಾನಿಸುತ್ತೇವೆ. ನಾವು ಮುಗ್ಧತೆಯಿಂದ ಒಂದು ಲಿಂಕ್‌ನ್ನು (ಸಂಪರ್ಕಕೊಂಡಿ) ಓತ್ತುತ್ತೇವೆ ಆದರೆ ಫಲಿತಾಂಶವು ಎಲ್ಲಾ ಕಡೆಯಲ್ಲಿರುವ ಹಾಗೆಯೇ ಅಶ್ಲೀಲತೆಯಿಂದ ಇರುತ್ತದೆ. ಆದ್ದರಿಂದ ನಾವು ಏನು ಮಾಡಬೇಕು?

ಸಂಡೇ ಸ್ಕೂಲ್‌ನಲ್ಲಿ (ಮಕ್ಕಳ ಭಾನುವಾರದ ಶಾಲೆ) ಹಾಡುತ್ತಿದ್ದಂತಹ ಪಲ್ಲವಿಯನ್ನು ನೆನಸಿಕೊಳ್ಳಿರಿ.

ಪುಟ್ಟ ಕಣ್ಣು ನೀನು ನೋಡುವುದರಲ್ಲಿ ಜಾಗರೂಕನಾಗಿರು
ಪುಟ್ಟ ಕಣ್ಣು ನೋಡುವುದರಲ್ಲಿ ಜಾಗರೂಕವಾಗಿರು

ಮೇಲಿರುವ ತಂದೆ ಪ್ರೀತಿಯಿಂದ ಕೆಳಗೆ ನೋಡುತ್ತಿರುವನು ಆದ್ದರಿಂದ ಪುಟ್ಟ ಕಣ್ಣು ನೀನು ನೋಡುವುದರಲ್ಲಿ ಜಾಗರೂಕವಾಗಿರು.

ಸಂಡೇ ಸ್ಕೂಲ್‌ನಲ್ಲಿ ಕಲಿಸಿದಂತಹ ಸಂಗತಿಗಳು ಆಗಾಗ್ಗೆ ತುಂಬಾ ಗಾಢವಾಗಿರುತ್ತವೆ. ಅಂತಹ ಪಾಠಗಳು ಬಹುತೇಕ ಸ್ವಭಾವದಲ್ಲಿ ಪ್ರವಾದನೆಗಳಾಗಿದ್ದವು ಅವು 50 ವರ್ಷಗಳ ಕೆಳಗೆ ನಾವು ಎದುರಿಸುವಂತಹವುಗಳ ಸೂಚಕಗಳಾಗಿದ್ದವು.

ನಾವು ಬೆಳಕಿನ ಮಕ್ಕಳು ಎಂಬುದಾಗಿ ನಮಗೆ ನಾವೇ ಹೇಳಿಕೊಳ್ಳುತ್ತಿರಬೇಕು ನಮ್ಮ ಮೊದಲ ನೋಟವನ್ನು ತಡೆಯಲು ಸಾಧ್ಯವಿಲ್ಲ ಆದರೆ ಎರಡನೇ ನೋಟವನ್ನು ನಿಶ್ಚಯವಾಗಿ ತಪ್ಪಿಸಬೇಕು. ಅಲ್ಲಿ ಜಾಹೀರಾತು ಫಲಕಗಳು ಇವೆ ಎಂಬುದಾಗಿ ತಿಳಿಯದೆ ನಾವು ನೋಡಿರಬಹುದು ಆದರೆ ನಾವು ಜಾಹೀರಾತು ಫಲಕಗಳನ್ನು ಹಾದು ಹೋಗಿ, ಆಮೇಲೆ ಹಿಂತಿರುಗಿ ಅದನ್ನು ಎರಡನೆ ನೋಟದಲ್ಲಿ ನೋಡುವಾಗ ಅಲ್ಲಿ ಒಂದು ತೊಂದರೆಯಿರುತ್ತದೆ. ನಮ್ಮ ಜೀವಿತದಲ್ಲಿ ಶುದ್ಧತೆ ಮತ್ತು ನಮ್ರತೆಗೆ ಬದ್ಧತೆಯುಳ್ಳವರಾಗಿರಬೇಕು. ಯಾಕೆಂದರೆ ನಾವು ಬೆಳಕಿನ ಮಕ್ಕಳಾಗಿದ್ದೇವೆ ಮತ್ತು ಎರಡನೇ ನೋಟವನ್ನು ನಾವು ತಿರಸ್ಕರಿಸುತ್ತೇವೆ. ಆಮೆನ್!

## ಡೇಟಿಂಗ್‌ನ (ಪ್ರಣಯದ ಜೊತೆ) ಮಾನದಂಡಗಳು

## ಯೌವ್ವನಸ್ಥ ಜನರು

ನೀವು ಡೇಟಿಂಗ್ (ಪ್ರಣಯ) ಮಾಡುವಾಗ ಶಾರೀರಿಕವಾಗಿ ತೊಡಗಿಸಿಕೊಳ್ಳುವುದನ್ನು ಮತ್ತು ಇತರರು ನೀವು ಮಾಡುತ್ತಿರುವ ವಿಷಯಗಳನ್ನು ತಿಳಿಯಬಾರದೆಂದು ನೀವು ಇಷ್ಟಪಡುವ ಕಾರ್ಯಗಳನ್ನು ಮಾಡಲೂ ಸ್ಥಳಗಳಿಗೆ ಅಥವಾ ಊರುಗಳಿಗೆ ಹೋಗುವುದನ್ನು ನಿಯಂತ್ರಿಸಿರಿ. ಮುಚ್ಚಿದ ಬಾಗಿಲುಗಳ ಹಿಂದೆ ನೀವಿಬ್ಬರು ಏಕಾಂತವಾಗಿರುವುದನ್ನು ನಿಯಂತ್ರಿಸಿರಿ. ಪ್ರತಿಯೊಬ್ಬರೂ ಶಾರೀರಿಕ ತೊಡಗಿಸಿಕೊಳ್ಳುವಿಕೆ ಹೊಂದುತ್ತಿರಬಹುದು ಆದರೆ ನೀವು ವಿಭಿನ್ನವಾದವರು ಎಂಬುದನ್ನು ನೆನಪಿಸಿಕೊಟ್ಟಿರಿ. ನಿಮ್ಮ ಜೀವಿತದಲ್ಲಿ ಪರಿಶುದ್ಧತೆಗೆ ಬದ್ಧತೆಯುಳ್ಳವರಾಗಿದ್ದೀರಿ.

## ತಂದೆತಾಯಿಗಳು

ತಂದೆತಾಯಿಗಳು ಎಚ್ಚರಿಸಲ್ಪಡಬೇಕು. ನಿಮ್ಮ ಹದಿಹರೆಯದ ಮತ್ತು ಇಪ್ಪತ್ತರ ಪ್ರಾಯದ ಮಕ್ಕಳೊಂದಿಗೆ ಮಾತಾನಾಡುವ ಅಗತ್ಯತೆಯಿದೆ. ನಿಮ್ಮ ಮಗ ಅಥವಾ ಮಗಳಿಗೆ ಸಲಹೆಗಳನ್ನು ನೀಡಲೂ ನಿಮ್ಮ ಸಭಾಪಾಲಕರ ಸಹಾಯ ಕೇಳಿರಿ. ಆದರೆ ನೀವು ಜವಾಬ್ದಾರಿಯುಳ್ಳವರಾಗಿರಬೇಕೆಂದು ದೇವರು ಮಾಡಿದ್ದನ್ನು ಮಾಡಲೂ ಸಭೆ ಅಥವಾ ಸಭಾಪಾಲಕರಿಂದ ಅಪೇಕ್ಷಿಸಬೇಡಿರಿ. ನಿಮ್ಮ ಮಕ್ಕಳು ನಿಮ್ಮ ಕೈಕೆಳಗೆ ಜೀವಿಸುವವರೆಗೂ ನೀವೇ ಮೇಲಾಧಿಕಾರಿಯಾಗಿದ್ದೀರಿ. ಸಭೆಯು ಅವರಿಗೆ ದೇವರ ವಾಕ್ಯವನ್ನು ಬೋಧಿಸುತ್ತದೆ. ಅವರನ್ನು ಪವಿತ್ರಾತ್ಮನಿಂದ ತುಂಬಿಸಲ್ಪಡುವಂತೆ ಮಾಡಿರಿ ಮತ್ತು ಕ್ರಿಸ್ತನಲ್ಲಿ ಪರಿಪಕ್ವತೆಗೊಳಿಸಿರಿ ಆದರೆ ತಂದೆ ತಾಯಿಯಾಗಿ ಅವರು ನಿಮ್ಮ ಜವಾಬ್ದಾರಿಯಾಗಿದ್ದಾರೆ. ಉದಾಹರಣೆಗೆ, ನಿಮ್ಮ ಮಗನು ಅವನ ಕಾಲೇಜಿನ ಒಬ್ಬ ಹುಡುಗಿಯನ್ನು ನಿಮ್ಮ ಮನೆಗೆ ಕರೆದುಕೊಂಡು ಬಂದು ನಿಮ್ಮ ನಡುಮನೆ ಅಥವಾ ಕೂರುಕೋಣೆಯಲ್ಲಿ ಇರುವುದರ ಬದಲಿಗೆ ನಿಮ್ಮ ಮಗನ ಕೊಠಡಿಗೆ ಹೋಗಿ ಬಾಗಿಲನ್ನು ಮುಚ್ಚಿಕೊಳ್ಳುವ ಆಯ್ಕೆ ಮಾಡುತ್ತಾರೆ. ಆ ಒಂದು ಹುಡುಗಿಗೆ ನೀವು ಒಂದು ಲೋಟ ಚಹಾ ಮಾಡಲೂ ನಿರತರಾಗಿರಬಹುದು ಆದರೆ ಅವರಿಬ್ಬರೇ ಏಕಾಂತವಾಗಿ ಮುಚ್ಚಿದ ಕೋಣೆಯಲ್ಲಿರುವುದನ್ನು ನೀವು ನೋಡಬಹುದು ದಯವಿಟ್ಟು ಬಾಗಿಲು ತಟ್ಟಿರಿ ಅವರನ್ನು ಹೊರಗಡೆ ಕರೆಯಿರಿ ನಿಮ್ಮ ಮನೆಯಲ್ಲಿ ಮುಚ್ಚಿದ ಕೊಠಡಿಯಲ್ಲಿ ಅವರು ಮಾಡಲೂ ಯಾವುದೇ ಕಾರ್ಯ ವ್ಯವಹಾರಗಳಿರುವುದಿಲ್ಲ. ನೀವು ಅದನ್ನು ಮಾಡಿದರೆ ನಿಮ್ಮ ಮಗನು ನಾಳೆ ನಿಮ್ಮ ಮನೆಗೆ ಬರುವುದಿಲ್ಲ ಎಂಬುದಾಗಿ ತಳಮಳಗೊಳ್ಳಬಹುದು. ನೀವು ಅವನ ನಡವಳಿಕೆಯನ್ನು ಅವನು ನಂಬಿಗಸ್ತನಾಗಿ ಸಭೆಗೆ ಹೋಗುತ್ತಾನೆ, ಎಲ್ಲಾ ಯೌವ್ವನಸ್ಥ ಕೂಟಗಳಿಗೆ ಹೋಗುತ್ತಾನೆ. ಅವನು ಒಬ್ಬ ದೈವಿಕ ತರುಣ ಆದ್ದರಿಂದ ಅವನು ಒಳಗಡೆ ಯಾವುದೇ ಕೆಟ್ಟದ್ದನ್ನು ಮಾಡುತ್ತಿಲ್ಲ ಎಂಬುದಾಗಿ ನಿರಾಕರಿಸಬಹುದು.

ತಂದೆತಾಯಿಗಳೇ ನಿಮ್ಮ ಯೌವ್ವನಸ್ಥ ಮಕ್ಕಳು ಹಾರ್ಮೋನುಗಳನ್ನು ಹೊಂದಿದ್ದಾರೆಯೇ ನೆನಪಿಸಿಕೊಳ್ಳಿರಿ. ನಾವು ಸಭೆಯಲ್ಲಿ ಜನರ ನಡುವೆ ಸಾಮರಸ್ಯ ಉಂಟುಮಾಡುವುದಿಲ್ಲ! ಆದ್ದರಿಂದ ನಿಮ್ಮ ಮಕ್ಕಳು ನಂಬಿಗಸ್ತರಾಗಿ ಸಭೆಗೆ ಹಾಜರಾಗುತ್ತಿರಬಹುದು ಎಂಬುದು ಸತ್ಯಕರವಾಗಿರಬಹುದು, ಮನೆಯಲಿ ಅವರ ಜವಾಬ್ದಾರಿಯು ನಿಮ್ಮದಾಗಿರುತ್ತದೆ. ಕ್ರೈಸ್ತರಾಗಿ ನಮ್ಮಿಂದ ಸತ್ಯವೇದವು ಶುದ್ಧತೆ ಮತ್ತು ನಮ್ರತೆಯ ಗುಣಮಟ್ಟವನ್ನು ಜಾರಿಗೊಳಿಸಬೇಕೆಂದು ಹೇಳುತ್ತದೆ. ಯಾವುದು ತಪ್ಪು ಮತ್ತು ಸರಿ ಎಂಬುದನ್ನು ಸಭೆಯ ಭಾಗವಾಗಿ ನಾವು ಮಾಡುತ್ತೇವೆ. ಆದರೆ ಮುಚ್ಚಿದ

ಬಾಗಿಲು ಹಿಂದೇ ನಿಮ್ಮ ಮಕ್ಕಳು ವಿರುದ್ಧ ಲಿಂಗದವರ ಜೊತೆ ಕುಳಿತುಕೊಳ್ಳಲು ಅವಕಾಶ ನೀಡಿದರೆ, ಒಂದು ಕ್ಷಣದ ಬಲಹೀನತೆಯಲ್ಲಿ ಅವರ ತಲೆಯ ಮೇಲೆ ಪ್ರಾರ್ಥನೆಯ ಕೈಗಳನ್ನು ಇಟ್ಟಿದಂತರಿಂದ ಮತ್ತು ಸಭೆಯಲ್ಲಿ ಕೇಳಿದಂತಹ ಸಂದೇಶಗಳಲ್ಲೆದ್ದರಿಂದ ಅವರ ಹಾರ್ಮೋನ್‌ಗಳು ಹೊರಬರುವವುಗಳಾಗಿರುತ್ತದೆ.

ತಂದೆ ತಾಯಿಗಳು ಅವರ ಮಕ್ಕಳೊಂದಿಗೆ ವ್ಯವಹರಿಸುವ ವಿಷಯಕ್ಕೆ ಬರುವಾಗ, ಅವರ ಪಾದಗಳನ್ನು ಕೆಳಗಿಳಿಸುವ ಅಥವಾ ಪಾಠ ಕಲಿಸುವ ಅಗತ್ಯತೆಯಿದೆ ಇಲ್ಲವಾದರೆ ಒಂದು ದಿನ ನಿಮ್ಮ ಮನೆಯಲ್ಲಿ ದೈವಿಕ ಗುಣಮಟ್ಟವನ್ನು ಇರಿಸಲೂ ನೀವು ವಿಫಲರಾಗುತ್ತೀರಿ.

## ಮದುವೆಯಾದ ದಂಪತಿಗಳು

ಮದುವೆಯಾದ ದಂಪತಿಗಳಾಗಿ, ನಮ್ಮ ಜೀವಿತದಲ್ಲಿ ಶುದ್ಧತೆಯನ್ನು ಪಾಲಿಸುವುದು ಅವಶ್ಯಕವಾಗಿದೆ. ಗಂಡಂದಿರು ಮತ್ತು ಹೆಂಡತಿಯರು ಒಬ್ಬರಿಗೊಬ್ಬರು ಬದ್ಧತೆಯುಳ್ಳವರಾಗಿದ್ದೇವೆ. ಕ್ರೈಸ್ತರಾಗಿ–ನಾವು ಬೆಳಕಿನ ಮಕ್ಕಳಾಗಿದ್ದೇವೆ! ನಮ್ಮ ಸ್ವಂತ ಮದುವೆಗಳಲ್ಲಿ ನಮ್ರತೆ ಮತ್ತು ಲೈಂಗಿಕ ಪವಿತ್ರತೆಗೆ ಬದ್ಧತೆಯುಳ್ಳವರಾಗಿದ್ದೇವೆ. ಗಂಡಂದಿರು ಮತ್ತು ಹೆಂಡತಿಯರು ನಿಮ್ಮ ಲೈಂಗಿಕ ಅವಶ್ಯಕತೆಯನ್ನು ನಿಮ್ಮ ಮದುವೆಗಳೊಳಗೆ ಗುರ್ತಿಸಿಕೊಳ್ಳೀರಿ. ಹೊರಗೆ ನೋಡುವುದನ್ನು ತಿರಸ್ಕರಿಸಿರಿ. ಪ್ರಪಂಚದಲ್ಲಿರುವ ಇತರರು ಲೈಂಗಿಕ ಸುಖ ನೆರವೇರಿಸಿಕೊಳ್ಳಲೂ ಹೊರಗಡೆ ನೋಡಬಹುದು ಆದರೆ ನಾವು ವಿಭಿನ್ನರಾದವರು! ''ನೀವಾದರೋ ನಿಮ್ಮನ್ನು ಕತ್ತಲೆಯೊಳಗಿಂದ ಕರೆದು ತನ್ನ ಆಶ್ಚರ್ಯಕರವಾದ ಬೆಳಕಿನಲ್ಲಿ ಸೇರಿಸಿದಾತನ ಗುಣಾತಿಶಯಗಳನ್ನು ಪ್ರಚಾರ ಮಾಡುವವರಾಗುವಂತೆ ದೇವರಾದುಕೊಂಡ ಜನಾಂಗವೂ ರಾಜವಂಶಸ್ಥರಾದ ಯಾಜಕರೂ ಮೀಸಲಾದ ಜನವೂ ದೇವರ ಸ್ವಕೀಯ ಪ್ರಜೆಯೂ ಆಗಿದ್ದೀರಿ.'' (1 ಪೇತ್ರನು 2:9) ಎಂಬುದಾಗಿ ಸತ್ಯವೇದ ಹೇಳುತ್ತದೆ.

ನಾನು ಮತ್ತು ನೀವುಗಳು ಕತ್ತಲೆಯೊಳಗಿಂದ ಕರೆಯಲ್ಪಟ್ಟು ಬೆಳಕಿನವರಾಗಿ ಜೀವಿಸುವ ಕರೆಯಲ್ಪಟ್ಟವರಾಗಿದ್ದೇವೆ. ನಾವು ಬೆಳಕಾಗಿದ್ದೇವೆ ಮತ್ತು ಬೆಳಕಿನ ಮಕ್ಕಳಾಗಿ ನಡೆಯಬೇಕೆಂಬುದಾಗಿ ಸತ್ಯವೇದ ಹೇಳುತ್ತದೆ. ನಮ್ಮ ಸುತ್ತಲಿನ ಪ್ರಪಂಚಕ್ಕಿಂತ ನಾವುಗಳು ಅಮೂಲಾಗ್ರವಾಗಿ ವಿಭಿನ್ನರಾಗಿರಬೇಕು. ನಮ್ಮ ಕೆಲಸದ ಸ್ಥಳ ಅಥವಾ ವೃತ್ತಿ, ನೌಕರರಾಗಿ, ಉದ್ಯೋಗದಾತನಾಗಿ, ಗೃಹಿಣಿಯಾಗಿ, ನಮ್ಮ ಸುತ್ತಲಿರುವವರಿಗಿಂತ ಸಂಪೂರ್ಣವಾಗಿ ವಿಭಿನ್ನವಾಗಿರಬೇಕು. ಅದನ್ನು ದೇವರು ನಮ್ಮಿಂದ ಅಪೇಕ್ಷಿಸುತ್ತಾನೆ.

ಒಬ್ಬ ಯೌವ್ವನಸ್ಥ ಪುರುಷನಾಗಿ, ಒಬ್ಬ ಯೌವ್ವನಸ್ಥ ಸ್ತ್ರೀಯಾಗಿ, ತಂದೆತಾಯಿಯಾಗಿ, ಒಬ್ಬ ಗಂಡನಾಗಿ ಒಬ್ಬ ಹೆಂಡತಿಯಾಗಿ ನಾವು ವಿಭಿನ್ನರಾಗಿದ್ದೇವೆ!

ನಮ್ಮ ಜೀವಿತದಲ್ಲಿ ಶುದ್ಧತೆಗೆ ಬದ್ಧತೆಯುಳ್ಳವರಾಗಿದ್ದೇವೆ ಮತ್ತು ನಮ್ಮ ಜೀವಿತದಲ್ಲಿ ರಾಜಿ ಮಾಡಿಕೊಳ್ಳುವುದಿಲ್ಲ. ರಾಜಿ ಮಾಡಿಕೊಳ್ಳುವುದು ಯಾವಾಗಲೂ ಬಂಧನದಲ್ಲಿರಿಸುತ್ತದೆ. ನಮ್ಮ ಜೀವಿತದಲ್ಲಿ ರಾಜಿ ಮಾಡಿಕೊಳ್ಳಲೂ ಪ್ರಾರಂಭಿಸಿದ ದಿನದಿಂದ ನಮ್ಮ ಸ್ವಂತ ಸೆರೆಮನೆಗಳಲ್ಲಿ ನಾವು ಬಂಧಿತರಾಗುವುದು ಖಚಿತವಾಗಿರುತ್ತದೆ.

# ನೀವು ಹೊಂದಿಕೊಳ್ಳಲು ಮಾದರಿಗಳು

ಆಲ್ ಪೀಪಲ್ಸ್ ಸಭೆಯು ಉಚಿತವಾಗಿ ವಿದ್ಯುನ್ಮಾನ ಪ್ರತಿಗಳನ್ನು(ಮೈಕ್ರೋಸಾಫ್ಟ್ ಪದ ದಾಖಲೆಗಳನ್ನು) ಯಾವುದಾದರೂ ಅಥವಾ ನಾವು ಉಪಯೋಗಿಸುವಂತಹ ಕೆಳಕಂಡ ದಾಖಲೆಗಳನ್ನು ಒದಗಿಸಲು ಸಂತೋಷವುಳ್ಳವರಾಗಿದ್ದೇವೆ.

ಸಭಾ ಸಿಬ್ಬಂದಿ ಮಾರ್ಗದರ್ಶಿ

ಸಭಾ ಸಿಬ್ಬಂದಿ ಕಾರ್ಯ ನಿರ್ವಹಣೆ ವಿಮರ್ಶೆ ದಾಖಲೆ

ಸಭಾ ಸ್ವಯಂ ಸೇವಕ ಮಾರ್ಗದರ್ಶಿ

ಲೈಫ್‌ಗ್ರೂಪ್ ನಾಯಕರುಗಳು ತರಬೇತಿ ಕೈಪಿಡಿ

ಸಭಾ ಸದಸತ್ವ ಕಿರುಪುಸ್ತಕ

ಮಾರ್ಗದರ್ಶನದ ಮಾರ್ಗದರ್ಶಿ

ಪಾತ್ರ ವಿವರಣೆಯ ಮಾದರಿ

contact@apcwo.orgಗೆ ನೀವು ಇ-ಮೇಲ್ ಕಳುಹಿಸುವ ಮೂಲಕವಾಗಿ ವಿನಂತಿಸಿ-ಕೊಳ್ಳಬಹುದಾಗಿದೆ.

ನಿಮ್ಮ ಸೇವೆಗೆ ಮತ್ತು ಸಭೆಗೆ ಸರಿ ಹೊಂದುತ್ತಿರುವಂತೆ ಉಪಯೋಗಿಸಿ ಮತ್ತು ಮಾರ್ಪಡಿಸಿಕೊಳ್ಳಲು ನೀವು ಸ್ವತಂತ್ರವಾಗಿ ಮಾಡಿರಿ ಉಪಯೋಗಿಸಿರಿ.

# ಆಲ್ ಪೀಪಲ್ಸ್ ಸಭೆಯೊಡನೆ ಪಾಲುಗಾರರಾಗಿರಿ

ಆಲ್ ಪೀಪಲ್ಸ್ ಸಭೆಯ ಸೇವಕರುಗಳು ಪ್ರಮುಖವಾಗಿ ಉತ್ತರ ಭಾರತದಲ್ಲಿ (ಅ) ನಾಯಕರುಗಳನ್ನು ಬಲಗೊಳಿಸುವುದು. (ಆ) ಸೇವೆಗಾಗಿ ಯೌವ್ವನಸ್ಥರನ್ನು ತರಭೇತಿಗೊಳಿಸುವುದು (ಇ) ಕ್ರಿಸ್ತನ ಅಂಗವನ್ನು ಕಟ್ಟುವುದನ್ನು, ಬಹಳ ಮುಖ್ಯ ಗುರಿಯಾಗಿರಿಸಿಕೊಂಡಿರುವ, ಭಾರತದೇಶದಾದ್ಯಂತ ತನ್ನ ಸ್ವಂತ ಎಲ್ಲೆ ಮೀರಿದ ಸ್ಥಳೀಯ ಸಭೆಯಾಗಿದೆ. ಯೌವ್ವನಸ್ಥರಿಗಾಗಿ ಅನೇಕ ತರಭೇತಿ ಅಧ್ಯಯನ ಸಂಕೀರ್ಣ, ಸಭಾಪಾಲಕರು ಮತ್ತು ಸಭಾಸೇವಕರ ಸಮಾವೇಶವನ್ನು ವರ್ಷಪೂರ್ತಿ ನಡೆಸುವುದು ಮತ್ತು ದೇವರ ವಾಕ್ಯದಲ್ಲಿ ಮತ್ತು ದೇವರಾತ್ಮನಲ್ಲಿ ವಿಶ್ವಾಸಿಗಳನ್ನು ಕಟ್ಟುವ ಉದ್ದೇಶದೊಡನೆ ಭಾರತ ದೇಶದ ಪ್ರಾದೇಶಿಕ ಭಾಷೆಗಳು ಮತ್ತು ಇಂಗ್ಲೀಷ್ ಭಾಷೆಯಲ್ಲಿ ನಮ್ಮ ಸಾವಿರಾರು ಸಂಖ್ಯೆಯ ಪುಸ್ತಗಳನ್ನು ಉಚಿತವಾಗಿ ಹಂಚುವುದನ್ನು ಇದಕ್ಕೆ ಸೇರಿಸಲ್ಪಟ್ಟಂತೆ ಮಾಡುತ್ತಿದ್ದೇವೆ.

ಇಂತಹ ಬೃಹತ್ತಾದ ಹಣದ ಒಳಗೊಳ್ಳುವಿಕೆಯನ್ನು ಮಾಡಲು ಕರ್ತನು ತಾನೇ ನಡೆಸುತ್ತಿದ್ದಾನೆ. ಒಂದು ಬಾರಿಯ ಆರ್ಥಿಕ ಸಹಾಯ ಅಥವಾ ಪ್ರತಿ ತಿಂಗಳ ಆರ್ಥಿಕ ಸಹಾಯದ ಮೂಲಕ ನೀವು ನಮ್ಮ ಜೊತೆ ಆರ್ಥಿಕ ಸಹಾಯದಲ್ಲಿ ಪಾಲುಗಾರರಾಗಲು ನಿಮ್ಮನ್ನು ಸ್ವಾಗತಿಸುತ್ತೇವೆ. ನಮ್ಮ ದೇಶದಾದ್ಯಂತ ಮಾಡುವ ಸೇವಾಕಾರ್ಯಗಳಿಗಾಗಿ ನೀವು ಕಳಿಸುವಂತಹ ನಿಮ್ಮ ಮೊತ್ತವು ಬಹಳವಾಗಿ ಮೆಚುಟಗೆವುಳ್ಳದ್ದಾಗಿರುತ್ತದೆ.

ನಿಮ್ಮ ಆರ್ಥಿಕ ಸಹಾಯವನ್ನು ಚೆಕ್ ಮೂಲಕವಾಗಿ ಕಳುಹಿಸಬಹುದು/ನಮ್ಮ ಕಛೇರಿಯ ವಿಳಾಸವಾದ "ಆಲ್ ಪೀಪಲ್ಸ್ ಸಭೆ ಬೆಂಗಳೂರು" ಗೆ ಬ್ಯಾಂಕ್ ಡ್ರಾಫ್ಟ್ ಗಳನ್ನು ಕೊಡಬಹುದು ಅಥವಾ ನಮ್ಮ ಬ್ಯಾಂಕಿನ ಖಾತೆಯ ವಿವರಗಳನ್ನು ಉಪಯೋಗಿಸಿ ನೇರವಾಗಿ ಬ್ಯಾಂಕ್ ಮೂಲಕ ನಿಮ್ಮ ಕಾಣಿಕೆಗಳನ್ನು ವರ್ಗಾಹಿಸಬಹುದು

Account Name: All Peoples Church
Account Number: 0057213809,
IFSC Code: CITI0000004
Bank: Citibank N.A., 506-507,
Level 5, Prestige Meridian 2, # 30,
M.G. Road, Bangalore - 560 001

*ದಯವಿಟ್ಟು ಗಮನಿಸಿ: ಆಲ್ ಪೀಪಲ್ಸ್ ಸಭೆಯು FCRA ಅನುಮತಿ ಹೊಂದಿಲ್ಲ ಮತ್ತು ಭಾರತೀಯ ನಾಗರೀಕರಿಂದ ಮಾತ್ರ ಬ್ಯಾಂಕ್ ಕಾಣಿಕೆಗಳನ್ನು ಅಂಗೀಕರಿಸುತ್ತಿದ್ದೇವೆ. ನಿಮ್ಮ ಕಾಣಿಕೆಗಳನ್ನು ಕೊಡುವಾಗ, ಆಲ್ ಪೀಪಲ್ಸ್ ಸಭೆಯ ಯಾವ ಕ್ಷೇತ್ರದಲ್ಲಿ ನಿಮ್ಮ ಕಾಣಿಕೆಯು ಉಪಯೋಗಿಸಬೇಕೆಂಬುದಾಗಿ ನಿಮ್ಮ ಅಪೇಕ್ಷೆಯನ್ನು ತಿಳಿಯಪಡಿಸಬಹುದು.*

ದಯವಿಟ್ಟು ನಮಗಾಗಿ ಮತ್ತು ನಮ್ಮ ಸೇವೆಗಾಗಿ ಪ್ರಾರ್ಥಿಸಿರಿ! ಧನ್ಯವಾದಗಳು ಮತ್ತು ದೇವರು ನಿಮ್ಮನ್ನು ಆಶೀರ್ವದಿಸಲಿ!

# ಉಚಿತ ಪ್ರಕಾಶನಗಳು ಮತ್ತು ಸಂಗ್ರಹಗಳು

ಕೆಲಸದ ಕಡೆಗೆ ಸತ್ಯವೇದದ ನೋಟ

ನಿನ್ನ ಕರೆಯನ್ನು ಕಡೆಗಣಿಸದಿರು

ನಿರೀಕ್ಷೆಯನ್ನು ಕಳೆದುಕೊಳ್ಳಬೇಡ

ವಿಶ್ವಾಸಿಗಳನ್ನು ಸಜ್ಜುಗೊಳಿಸುವುದು

ವೈಯುಕ್ತಿಕ ಮತ್ತು ತಲೆಮಾರಿನ ಬಂಧನಗಳನ್ನು ಮುರಿಯುವುದು

ನಿಮ್ಮ ಸಭಾಪಾಲಕರಿಗೆ ಹೇಗೆ ಸಹಾಯ ಮಾಡುವುದು

ದೇವರ ರಾಜ್ಯ ಕಟ್ಟುವವರು

ಪರಲೋಕವೆಂದು ಕರೆಯಲ್ಪಡುವ ನಿಜ ಸ್ಥಳ

ದೇವರ ಉದ್ದೇಶಗಳಿಗೆ ಜನ್ಮ ಕೊಡುವುದು

ಬೇರುಗಳಿಗೆ ಕೊಡಲಿ ಹಾಕುವುದು

ನಿಮ್ಮ ಜೀವಿತಕ್ಕಿರುವ ದೇವರ ಉದ್ದೇಶವನ್ನು ನೆರವೇರಿಸುವುದು

ಉಜ್ಜೀವನದಲ್ಲಿ ಒಂದು ಸಭೆ

ದೇವರ ಪ್ರಸನ್ನತೆ

ಜ್ಞಾನ, ಪ್ರಕಟನೆ ಮತ್ತು ಬಲದ ಆತ್ಮನು

ದೇವರು ಒಳ್ಳೆಯ ದೇವರಾಗಿದ್ದಾನೆ

ಅಸ್ತಿವಾರಗಳು ಭಾಗ – 1

ತೆರೆದ ಪರಲೋಕಗಳು

ಜೀವನದ ರಾತ್ರಿಯ ಸಮಯಗಳು

ಪ್ರಾಮಾಣಿಕತೆ

ನಾವು ಕ್ರಿಸ್ತನಲ್ಲಿ ಯಾರಾಗಿದ್ದೇವೆ

ಪರಿವರ್ತನೆ

ಗೌರವದ ಸಂಕೇತ

ದೇವರ ಮನೆ

ಮದುವೆ ಮತ್ತು ಕುಟುಂಬ

ದೈವಿಕ ದಯೆ

ದೈವಿಕ ಕ್ರಮ – ನಗರ ವ್ಯಾಪ್ತಿ ಸಭೆಗಳಲ್ಲಿ

ಶುದ್ಧೀಕರಿಸುವ ಬೆಂಕಿ

ಬದ್ಧತೆಯ ಬಲ

ಜಗಳರಹಿತವಾದ ಜೀವಿತ ಜೀವಿಸುವುದು

ಕೆಲಸ ಮತ್ತು ಅದರ ಮೂಲ ವಿನ್ಯಾಸ

ನಾವು ವಿಭಿನ್ನರು

ತಂದೆಯ ಪ್ರೀತಿ

ನಮ್ಮ ವಿಮೋಚನೆ

ಆತ್ಮಿಕವಾಗಿ ಮನಸುಳ್ಳವರಾಗಿರುವುದು ಲೌಕಿಕ ಜ್ಞಾನವಂತರಾಗಿರುವುದು

ದೇವರ ಮಾರ್ಗದರ್ಶನ ಪಡೆದುಕೊಳ್ಳುವುದು

ಪವಿತ್ರಾತ್ಮದಲ್ಲಿ ದೀಕ್ಷಾಸ್ನಾನ

ಪ್ರತಿ ಉದ್ದೇಶಕ್ಕೂ ಒಂದು ಸಮಯವಿದೆ

ಶ್! ಹರಟೆ ಬೇಡ

**ಉಚಿತ ಇ-ಪುಸ್ತಕಗಳು**

ನಮ್ಮ ಚರ್ಚ್ ವೆಬ್ ಸೈಟ್‌ಂದ ನಮ್ಮ ಎಲ್ಲಾ ಪುಸ್ತಕಗಳ ಪಿ ಡಿ ಎಫ್ ಅನುವಾದವನ್ನು ಉಚಿತವಾಗಿ ಸಂಗ್ರಹಿಸಲು ದೊರೆಯುತ್ತವೆ. ಇತರೆ ಪ್ರಾದೇಶಿಕ ಭಾಷೆಗಳಲ್ಲೂ ಸಹ ಈ ಪುಸ್ತಕಗಳು ದೊರೆಯುತ್ತದೆ. ಇಂತಹ ಉಚಿತ ಪುಸ್ತಕಗಳಿಗಾಗಿ ಇ–ಮೇಲ್ ಅಥವಾ ಅಂಚೆಯ ಮೂಲಕವಾಗಿ ನಮ್ಮನ್ನು ಸಂಪರ್ಕಿಸಹುದಾಗಿದೆ.

**ಉಚಿತ ಆಡಿಯೋ ಮತ್ತು ವೀಡಿಯೊ ಸಂದೇಶಗಳು**

ಉಚಿತ ಆಡಿಯೋ, ವೀಡಿಯೋ ಸಂದೇಶಗಳು, ಪ್ರಸಂಗದ ಟಿಪ್ಪಣಿಗಳಿಗಾಗಿ ನಮ್ಮ ವೆಬ್‌ಸೈಟನ್ನು ಸಂಪರ್ಕಿಸಿ (apcwo.org/sermons) ಮತ್ತು ಇತರೆ ಅನೇಕ ಅಧ್ಯಯನ ಸಂಗ್ರಹ ಬಳಸಹುದು.

# ಆಲ್ ಪೀಪಲ್ಸ್ ಸಭೆಯ ಬಗ್ಗೆ

ನಮ್ಮ ಬೆಂಗಳೂರು ನಗರದಲ್ಲಿ ಉಪ್ಪು ಮತ್ತು ಬೆಳಕು ಆಗಿರಬೇಕೆಂದು ಮತ್ತು ಭಾರತ, ಪ್ರಪಂಚದ ಎಲ್ಲಾ ರಾಷ್ಟ್ರಗಳಿಗೂ ಧ್ವನಿ ಆಗಿರಬೇಕೆಂಬುದು ಆಲ್ ಪೀಪಲ್ಸ್ ಸಭೆಯ ದರ್ಶನವಾಗಿದೆ.

ನಾವು, ಆತನ ಪವಿತ್ರಾತ್ಮನ ಪ್ರಮಾಣಿಕರಣ ಮತ್ತು ರಾಜಿ ಹೊಂದದ, ಅಭಿಷೇಕಹೊಂದಿದ ದೇವರ ವಾಕ್ಯವನ್ನು ಪರಿಪೂರ್ಣವಾಗಿ ಪ್ರಸ್ತುತ ಪಡಿಸುವ ಬದ್ಧತೆ ಹೊಂದಿದ್ದೇವೆ. ನಾವು ಒಳ್ಳೆಯ ಸಂಗೀತ, ಸೃಜನಾತ್ಮಕ ಪ್ರಸ್ತುತಿ, ಪ್ರತಿಭಾವಂತ ಸಮರ್ಥನೆಗಳು, ಸಮಕಾಲೀನ ಸೇವಾ ತಂತ್ರಗಳು, ಇತ್ತೀಚಿನ ತಂತ್ರಜ್ಞಾನ ಮುಂತಾದವುಗಳು, ದೈವದತ್ತ ವಿಧಾನಹೊಂದಿದ ದೇವರ ವಾಕ್ಯವನ್ನು ಪವಿತ್ರಾತ್ಮನ ಸೂಚಕಕಾರ್ಯ, ಅಧ್ಭುತಕಾರ್ಯ, ಮಹತ್ಕಾರ್ಯ ಮತ್ತು ಪವಿತ್ರಾತ್ಮನ ವರದಲ್ಲಿ ಸಾರುವುದನ್ನು ಬದಲಿಸಲು ಸಾಧ್ಯವಿಲ್ಲವೆಂದು ನಂಬುತ್ತೇವೆ. (1 ಕೊರಿಂಥದವರಿಗೆ 2: 4,5, ಇಬ್ರಿಯರಿಗೆ 2: 3,4.) ಯೇಸು ನಮ್ಮ ಉದ್ದೇಶ, ದೇವರ ವಾಕ್ಯ ನಮ್ಮ ವಿಷಯ, ಪವಿತ್ರಾತ್ಮನ ಬಲ ನಮ್ಮ ಕ್ರಮ, ಜನರು ನಮ್ಮ ಅನುರಾಗ, ಕ್ರಿಸ್ತನ ಮಾದರಿಯ ಪ್ರೌಢತೆ ನಮ್ಮ ಗುರಿಯಾಗಿದೆ.

ಆಲ್‌ಪೀಪಲ್ಸ್ ಸಭೆಯು ಭಾರತದಲ್ಲಿ ಅನೇಕ ಸಭೆಗಳನ್ನು ಹೊಂದಿದೆ ಮತ್ತು ಹೊಸ ಸಭೆಗಳು ನಿಯತಕಾಲಿಕವಾಗಿ ಸ್ಥಾಪಿಸಲ್ಪಡುತ್ತಿವೆ. ಪ್ರಸಕ್ತವಾದ ಪಟ್ಟಿಯನ್ನು ಪಡೆಯಲು ಮತ್ತು ಆಲ್ ಪೀಪಲ್ಸ್ ಸಭೆಯ ಸ್ಥಳಗಳ ಬಗ್ಗೆ ಮಾಹಿತಿಗಳನ್ನು ಪಡೆದುಕೊಳ್ಳಲು, ನಮ್ಮ ವೆಬ್‌ಸೈಟ್‌ನ್ನು ಸಂಪರ್ಕಿಸಿರಿ. www. apcwo.org ಅಥವಾ contact@apcwo.org ಗೆ ಇ-ಮೇಲ್ ಕಳುಹಿಸಿರಿ.

# ನಿಮ್ಮನ್ನು ಪ್ರೀತಿಸುವ ದೇವರನ್ನು ನೀವು ತಿಳಿದಿದ್ದಿರೋ?

ಸುಮಾರು ಎರಡು ಸಾವಿರ ವರ್ಷಗಳ ಹಿಂದೆ, ದೇವರು ಮನುಷ್ಯನಾಗಿ ಭೂಲೋಕಕ್ಕೆ ಬಂದನು. ಆತನ ಹೆಸರು ಯೇಸು.

ಆತನು ಪಾಪರಹಿತ ಜೀವನ ನಡಿಸಿದನು. ಯೇಸುವು ಶರೀರಧಾರಿಯಾದ ದೇವರಾಗಿದ್ದದರಿಂದ ಆತನು ಹೇಳಿದ್ದರಲ್ಲಿ, ಮಾಡಿದ್ದರಲ್ಲಿ ದೇವರನ್ನು ನಮಗೆ ಪ್ರಚುರಪಡಿಸಿದ್ದಾನೆ. ಆತನು ಆಡಿದ ಮಾತುಗಳು ಸ್ವತಃ ದೇವರ ಮಾತುಗಳೇ ಆಗಿದ್ದವು. ಆತನು ಮಾಡಿದ ಎಲ್ಲಾ ಕಾರ್ಯಗಳು ದೇವರ ಕಾರ್ಯಗಳೇ - ಯೇಸು ಭೂಲೋಕದಲ್ಲಿ ಅನೇಕ ಅದ್ಭುತ ಕಾರ್ಯಗಳನ್ನು ಮಾಡಿದನು. ರೋಗಗಳಲ್ಲಿ ನರಳುತ್ತಿದ್ದವರನ್ನು ಆತನು ಗುಣಪಡಿಸಿದನು. ಕುರುಡರಿಗೆ ಕಣ್ಣುಕೊಟ್ಟನು. ಕಿವುಡರನ್ನು ಮುಟ್ಟಿ ಕಿವಿಕೇಳುವಂತೆ ಮಾಡಿದನು. ಕುಂಟರನ್ನು ನಡೆದಾಡುವಂತೆ ಮಾಡಿದನು. ಎಲ್ಲಾ ಬಗೆಯ ರೋಗಗಳನ್ನು ವಾಸಿಮಾಡಿದನು. ಹಸಿದ ಜನರಿಗೆ ಐದುರೊಟ್ಟಿ, ಎರಡು ಮೀನುಗಳಿಂದ ಉಣ್ಣಲು ಬಡಿಸಿದನು. ಸಮುದ್ರದ ಮೇಲೆ ನಡೆದನು, ಸಮುದ್ರದ ಬಿರುಗಾಳಿಯನ್ನು ಶಾಂತಗೊಳಿಸಿದನು. ಇನ್ನು ಅನೇಕ ಮಹತ್ಕಾರ್ಯಗಳನ್ನು ಮಾಡಿದನು.

**ಈ ಎಲ್ಲಾ ಅದ್ಭುತ ಕಾರ್ಯಗಳು ನಮಗೆ ದೇವರು, ಒಳ್ಳೆಯ ದೇವರು, ಆತನು ಜನರೆಲ್ಲರೂ, ಆರೋಗ್ಯದಿಂದಲೂ, ಸಂತೋಷದಿಂದಲೂ ಕ್ಷೇಮದಿಂದಲೂ ಇರಬೇಕೆಂದು ಬಯಸುತ್ತಾನೆ. ದೇವರು, ಜನರ ಎಲ್ಲಾ ಕೊರತೆಗಳನ್ನು ಪೂರೈಸುತ್ತಾನೆ ಮತ್ತು ನೀಗಿಸುತ್ತಾನೆ ಎಂದು ಪ್ರಕಟಿಸುತ್ತವೆ.**

ಆದುದರಿಂದ ದೇವರು ಯಾಕೆ ಮನುಷ್ಯನಾಗಿ ಈ ಲೋಕಕ್ಕೆ ಬರಲು ತೀರ್ಮಾನಿಸಿದನು? ಯೇಸುವು ಯಾಕೆ ಬಂದನು?

ನಾವೆಲ್ಲರೂ ಪಾಪ ಮಾಡಿದ್ದೇವೆ. ದೇವರ ದೃಷ್ಟಿಯಲ್ಲಿ ಅಂಗೀಕಾರವಾಗದ ಅನೇಕ ಕಾರ್ಯಗಳನ್ನು ಮಾಡಿದ್ದೇವೆ. ಪಾಪವು, ಅದರ ಕಾರ್ಯಫಲವನ್ನು ಹೊಂದಿದೆ. ಪಾಪವು ದೇವರಿಗೂ, ನಮಗೂ ನಡುವೆಯಿರುವ ಕದಲಿಸಲಾಗದ ಅಡ್ಡ ಗೋಡೆಯಾಗಿದೆ. ಪಾಪವು ನಮ್ಮನ್ನು ದೇವರಿಂದ ಬೇರ್ಪಡಿಸುತ್ತದೆ. ನಮ್ಮನ್ನು ಸೃಷ್ಟಿಸಿದ ದೇವರನ್ನು ತಿಳಿಯಲು ಮತ್ತು ಅರ್ಥಭರಿತ ಸಂಬಂಧವನ್ನು ಆತನೊಂದಿಗೆ ಹೊಂದಿಕೊಳ್ಳುವುದನ್ನು ಪಾಪವು ತಡೆದು ಹಿಡಿಯುತ್ತದೆ. ಆದುದರಿಂದ ನಮ್ಮಲ್ಲಿ ಅನೇಕರು ನಿರರ್ಥಕವಾದ ಬೇರೆ ವಿಷಯಗಳಿಂದ ಈ ಶೂನ್ಯವನ್ನು ತುಂಬಿಸಲು ಪ್ರಯತ್ನಿಸುತ್ತೇವೆ.

ನಮ್ಮ ಪಾಪದ ಮತ್ತೊಂದು ಫಲವೇನೆಂದರೆ ನಮ್ಮನ್ನು ದೇವರಿಂದ ನಿತ್ಯಕ್ಕೂ ಬೇರ್ಪಡಿಸುತ್ತದೆ. ದೇವರ ನ್ಯಾಯಸ್ಥಾನದಲ್ಲಿ ಪಾಪದ ಶಿಕ್ಷೆ ಮರಣವಾಗಿದೆ. ಮರಣವು ನಮ್ಮನ್ನು ನರಕದಲ್ಲಿ ದೇವರಿಂದ ಶಾಶ್ವತವಾಗಿ ಅಗಲಿಕೆಗೊಳಿಸುತ್ತದೆ. ಅಥವಾ ದೂರಸರಿಯುವಂತೆ ಮಾಡುತ್ತದೆ.

ಆದರೆ ನಮಗಿರುವ ಶುಭ ಸಮಾಚಾರವೇನೆಂದರೆ ನಾವು ಪಾಪಗಳಿಂದ ಸ್ವತಂತ್ರರಾಗಬಹುದು ಮತ್ತು ದೇವರೊಂದಿಗೆ ನವೀಕೃತಗೊಳ್ಳಬಹುದು. ಸತ್ಯವೇದವು "ಪಾಪವು ಕೊಡುವ ಸಂಬಳ ಮರಣ, ದೇವರ ಉಚಿತಾರ್ಥವರವು ನಮ್ಮ ಕರ್ತವಾದ ಕ್ರಿಸ್ತ ಯೇಸುವಿನಲ್ಲಿರವ ನಿತ್ಯಜೀವ" ಎಂದು ಹೇಳುತ್ತದೆ (ರೋಮಪುರ 6:23) ಯೇಸು ಪ್ರಪಂಚದ ಪಾಪಗಳಿಗೆ, ಶಿಲುಬೆಯ ಮೇಲೆ ಪ್ರಾಣಕೊಡುವ ಮೂಲಕ ಪಾಪದ ವಶದಿಂದ ಎಲ್ಲರನ್ನು ಬಿಡುಗಡೆಮಾಡಿದ್ದಾನೆ. ಮೂರನೇ ದಿನದಲ್ಲಿ ಎದ್ದು ಬಂದಿದ್ದಾನೆ. ಜೀವಿಸುವವನಾಗಿ ಅನೇಕರಿಗೆ ಕಾಣಿಸಿಕೊಂಡನು. ಮತ್ತು ಪರಲೋಕಕ್ಕೆ ಏರಿ ಹೋದನು.

ದೇವರು, ಕರುಣೆ, ಪ್ರೀತಿಯುಳ್ಳ ದೇವರು. ಯಾವನಾದರೂ ನರಕದಲ್ಲಿರಬೇಕೆಂದು ಆತನು ಬಯಸುವ ದೇವರಲ್ಲ ಆತನು, ಇಡೀ ಮನುಷ್ಯ ಕುಲವು ಪಾಪದ ಬಂಧನದಿಂದ ಸ್ವತಂತ್ರಗೊಳ್ಳಲು, ಪಾಪದ ಶಾಶ್ವತ ದೋಷ ಫಲಗಳಿಂದ ಬಿಡುಗಡೆ ಹೊಂದುವಂತೆ, ಮಾರ್ಗ ಮಾಡಿಕೊಡಲು ಬಂದನು. ಆತನು ಪಾಪಿಗಳನ್ನು ರಕ್ಷಿಸಲು ಬಂದನು. ನನ್ನಂತೆಯೇ, ನಿಮ್ಮಂತೆಯೇ, ಜನರನ್ನು ಪಾಪದಿಂದ, ನಿತ್ಯತ್ವದ ಮರಣದಿಂದ ಬಿಡುಗಡೆ ಮಾಡಲು ಬಂದನು.

ಈ ಉಚಿತವಾದ ಪಾಪಗಳ ಕ್ಷಮಾಪಣೆಯನ್ನು ಪಡೆಯಬೇಕಾದರೆ ನಾವು ಒಂದೇ ಒಂದು ವಿಷಯವನ್ನು ಮಾಡಬೇಕೆಂದು ಸತ್ಯವೇದ ಹೇಳುತ್ತದೆ. ನೀನು ಯೇಸುಕ್ರಿಸ್ತನು ಶಿಲುಬೆಯ ಮೇಲೆ ಮಾಡಿದ್ದೆಲ್ಲವನ್ನು ಅಂಗೀಕರಿಸಿಕೊಳ್ಳಬೇಕು. ಮತ್ತು ಸಂಪೂರ್ಣ, ಯಥಾರ್ಥ ಹೃದಯದಿಂದ ಯೇಸುವನ್ನು ನಂಬಬೇಕು.

**"ಆತನಲ್ಲಿ ನಂಬಿಕೆಯಿಡುವ ಪ್ರತಿಯೊಬ್ಬನು ಆತನ ಹೆಸರಿನ ಮೂಲಕವಾಗಿ ಪಾಪ ಪರಿಹಾರವನ್ನು ಹೊಂದುವನು"** (ಅಪೊಸ್ತಲರ ಕೃತ್ಯ 10:43)

**"ನೀನು ಯೇಸುವನ್ನೇ ಕರ್ತನೆಂದು ಬಾಯಿಂದ ಅರಿಕೆಮಾಡಿಕೊಂಡು ದೇವರು ಆತನನ್ನು ಸತ್ತವರೊಳಗೆ ಎಬ್ಬಿಸಿದನೆಂದು ಹೃದಯದಿಂದ ನಂಬಿದರೆ ನಿನಗೆ ರಕ್ಷಣೆಯಾಗುವದು ಎಂಬುದೇ"** (ರೋಮಾಪುರದವರಿಗೆ 10:9)

ನೀವು ಸಹ ಯೇಸುಕ್ರಿಸ್ತನನ್ನು ನಂಬಿದರೆ ನಿಮ್ಮ ಪಾಪಗಳಿಗೆ ಕ್ಷಮಾಪಣೆಯನ್ನು ಮತ್ತು ಪರಿಹಾರಗಳನ್ನು ಹೊಂದಿಕೊಳ್ಳಬಹುದು. ಯೇಸುವಿನ ಮೇಲೆ ನಂಬಿಕೆಯಿಡಲು, ಮತ್ತು ಆತನು ನಿಮಗೋಸ್ಕರ ಶಿಲುಬೆಯ ಮೇಲೆ ಮಾಡಿದ ಕಾರ್ಯಗಳಲ್ಲಿ ನಂಬಿಕೆಯಿಟ್ಟು ತೀರ್ಮಾನ ತೆಗೆದುಕೊಳ್ಳಲು ಈ ಮುಂದಿನ ಪ್ರಾರ್ಥನೆಯು ಸಹಾಯ ಮಾಡುವುದು. ಯೇಸು ಕ್ರಿಸ್ತನು ನಿಮಗಾಗಿ ಏನು ಮಾಡಿದನೆಂದೂ ಮತ್ತು ನಿಮ್ಮ ಪಾಪಗಳ ಕ್ಷಮಾಪಣೆ ಮತ್ತು ಶುದ್ಧೀಕರಣವನ್ನು ಹೊಂದಿಕೊಳ್ಳುವಂತೆಯೂ ಮತ್ತು ನಿಮ್ಮ ಅಂಗೀಕಾರವನ್ನು ತೋರಿಸುವಂತೆಯೂ ಸಹಾಯ ಮಾಡುತ್ತದೆ. ಈ ಪ್ರಾರ್ಥನೆ ಬರೀ ಮಾರ್ಗದರ್ಶಿಯಾಗಿದೆ. ನಿಮ್ಮ ಸ್ವಂತ ಮಾತುಗಳಲ್ಲಿ ಪ್ರಾರ್ಥಿಸಬಹುದು.

*ಪ್ರಿಯ ಕರ್ತನಾದ ಯೇಸುವೇ, ಇಂದು ನೀನು ನನಗಾಗಿ ಶಿಲುಬೆ ಮೇಲೆ ಮಾಡಿದ್ದನ್ನು ಅರ್ಥ ಮಾಡಿಕೊಂಡಿದ್ದೇನೆ. ನೀನು ನನಗಾಗಿ ಪ್ರಾಣ ಕೊಟ್ಟೆ. ನನಗಾಗಿ ನಿನ್ನ ಪವಿತ್ರವಾದ ರಕ್ತ ಸುರಿಸುವ ಮೂಲಕ ನನ್ನ ಪಾಪಗಳ ಪ್ರಾಯಶ್ಚಿತ್ತ ಮಾಡಿದಿ, ಇದರಿಂದ ನಾನು ಕ್ಷಮಿಸಲ್ಪಟ್ಟೆನು. ಯಾರ್ಯಾರು ಆತನ ಮೇಲೆ ನಂಬಿಕೆಯಿಟ್ಟರೊ, ಅವರು ಪಾಪಗಳ ಕ್ಷಮಾಪಣೆ ಹೊಂದಿದರು ಎಂದು ಸತ್ಯವೇದವು ನನಗೆ ತಿಳಿಸುತ್ತದೆ.*

*ಈ ದಿನ ನಾನು ನಿನ್ನನ್ನು ನಂಬುತ್ತೇನೆ. ನೀನು ನನಗಾಗಿ ಸಾಯುವುದರ ಮೂಲಕವೂ, ಮೂರನೇ ದಿನದಲ್ಲಿ ಜೀವಿತನಾಗಿ ಎದ್ದು ಬಂದದ್ದರ ಮೂಲಕವೂ ನೀನು ಮಾಡಿದ್ದನ್ನು ಅಂಗೀಕರಿಸಿಕೊಳ್ಳುತ್ತೇನೆ. ನನ್ನ ಒಳ್ಳೆಯ ಕೆಲಸಗಳಿಂದಲೂ, ಬೇರೊಬ್ಬನಿಂದಲೂ ನನ್ನನು ರಕ್ಷಿಸಿಕೊಳ್ಳಲು ಆಗುವುದಿಲ್ಲ. ನಾನು ನನ್ನ ಪಾಪಗಳ ಕ್ಷಮಾಪಣೆ ಸಂಪಾದಿಸಲು ಸಾಧ್ಯವಿಲ್ಲ.*

*ಈ ದಿನ ನಾನು ನನ್ನ ಹೃದಯದಿಂದ ನಂಬಿ ನನ್ನ ಬಾಯಿಂದ, "ನೀನು ನನಗಾಗಿ ಸತ್ತೇ, ನನ್ನ ಪಾಪಗಳ ಪ್ರಾಯಶ್ಚಿತ್ತ ಮಾಡಿದ್ದಿ. ಮರಣದಿಂದ ಜೀವಿತನಾಗಿ ಎದ್ದು ಬಂದಿದ್ದಿ ಎಂಬ ನಿನ್ನಲ್ಲಿ ಇಟ್ಟ ನಂಬಿಕೆಯಿಂದ, ನನ್ನ ಪಾಪಗಳ ಕ್ಷಮಾಪಣೆ, ಶುದ್ಧೀಕರಣ ಪಡೆದುಕೊಂಡೆ" ಎಂದು ಹೇಳುತ್ತೇನೆ.*

*ಯೇಸುವೇ ನಿನಗೆ ವಂದನೆಗಳು. ನಿನ್ನನ್ನು ಪ್ರೀತಿಸಲು ಸಹಾಯ ಮಾಡು. ನಿನ್ನನ್ನು ಇನ್ನೂ ತಿಳಿಯಲು ಮತ್ತು ನಿನಗೆ ನಂಬಿಗಸ್ತನಾಗಿರಲು ಸಹಾಯಮಾಡು. ಆಮೇನ್*

## DOWNLOAD THE FREE APP!

*Search for*

**"All Peoples Church Bangalore"**
**in the App or Google play stores.**

Available on the App Store

ANDROID APP ON Google play







*A daily 5-minute video devotional.*
*A daily Bible reading and prayer guide.*
*5-minute Sermon summary.*
*Toolkit with Scriptures on various topics to build faith and information to share the Gospel.*
*Resources with sermons, sermon notes, TV programs, books, music and more.*

*IF YOU LOVE IT, TELL OTHERS ABOUT IT!*

# ಆಲ್ ಪೀಪಲ್ಸ್ ಚರ್ಚ್
# ಸತ್ಯವೇದ ಶಾಲೆ ಮತ್ತು ಸೇವಾ ತರಬೇತಿ ಕೇಂದ್ರ

ಆಲ್ ಪೀಪಲ್ಸ್ ಸಭೆಯ ಸತ್ಯವೇದ ಶಾಲೆ ಮತ್ತು ಸೇವಾ ತರಬೇತಿ ಕೇಂದ್ರವು (APC-BC) ಭಾರತದ ಬೆಂಗಳೂರಿನಲ್ಲಿದೆ. ದೇವರ ವಾಕ್ಯದ ಬೌದ್ಧಿಕವಾದ ಉತ್ತೇಜಿಸುವಿಕೆಯ ಅಧ್ಯಯನ ಮತ್ತು ಸಿದ್ಧಾಂತಗಳ ಉತ್ತಮವಾದ ದೈವಿಕ ಸಿದ್ಧಾಂತಗಳೊಡನೆ ಪವಿತ್ರಾತ್ಮನ ಅತ್ಯದ್ಭುತಕರವಾದ ಬಲದಲ್ಲಿ ಸೇವೆ ಮಾಡಲೂ ಸಜ್ಜುಗೊಳಿಸುವುದು ಮತ್ತು ಆತ್ಮನಿಂದ ತುಂಬಿದ ಅಭಿಷೇಕ ಹೊಂದಿದ್ದು - ತರಬೇತಿಯನ್ನು ಪಡೆದುಕೊಳ್ಳುವುದನ್ನು ಒದಗಿಸುತ್ತೇವೆ. ಒಬ್ಬ ವ್ಯಕ್ತಿಯನ್ನು ದೈವಿಕ ಗುಣನಡತೆಗೆ ಒತ್ತು ನೀಡುವಂತಹ ಸೇವೆಗಾಗಿ, ದೇವರ ವಾಕ್ಯದಲ್ಲಿ ಆಳವಾಗಿ ಬೇರೂರುವುದಕ್ಕಾಗಿ, ಮತ್ತು ಕರ್ತನೊಂದಿಗಿನ ನಿಕಟವಾದ ಸಂಬಂಧದಲ್ಲಿ ಹೊರ ಹರಿಯುವಂತಹ ಅದ್ಭುತಗಳು, ಸೂಚಕ ಕಾರ್ಯಗಳು ಮತ್ತು ಮಹತ್ಕಾರ್ಯಗಳನ್ನು ಬಲಯುತವಾಗಿ ಪ್ರದರ್ಶಿಸಲು ಅವರನ್ನು ಅಭಿವೃದ್ಧಿಪಡಿಸುವುದನ್ನು ನಾವು ನಂಬುತ್ತೇವೆ.

ಏ.ಪಿ.ಸಿ-ಬಿ.ಸಿ.ಯಲ್ಲಿ ಉತ್ತಮವಾದ ಬೋಧನೆಗಳ ಜೊತೆಗೆ ದೇವರ ಪ್ರೀತಿಯನ್ನು ಪ್ರದರ್ಶಿಸುವುದು, ಅಭಿಷೇಕ ಮತ್ತು ಪವಿತ್ರಾತ್ಮನ ಪ್ರಸನ್ನತೆ ಮತ್ತು ದೇವರ ವಾಕ್ಯದ ಅತ್ಯದ್ಭುತಕರ ಕಾರ್ಯಗಳಿಗೆ ನಾವು ಒತ್ತು ಕೊಡುತ್ತೇವೆ. ಅನೇಕ ಯುವ ಪುರುಷ ಮತ್ತು ಸ್ತ್ರೀಯರು ತರಬೇತಿ ಹೊಂದಿದ್ದಾರೆ ಮತ್ತು ಅವರ ಜೀವಿತಗಳ ಮೇಲೆ ದೇವರ ಕರೆಯನ್ನು ನೆರವೇರಿಸಲು ಕಳುಹಿಸಲ್ಪಟ್ಟಿದ್ದಾರೆ.

ನಾವು ಮೂರು ಕಾರ್ಯಕ್ರಮಗಳನು ನೀಡುತ್ತೇವೆ:

ಒಂದು ವರ್ಷದ ಸರ್ಟಿಫಿಕೇಟ್ ಇನ್ ಥಿಯಾಲಜಿ ಮತ್ತು ಕ್ರಿಶ್ಚಿಯನ್ ಮಿನಿಸ್ಟ್ರಿ (C.Th.)
ಎರಡು ವರ್ಷದ ಡಿಪ್ಲೋಮ ಇನ್ ಥಿಯಾಲಜಿ ಮತ್ತು ಕ್ರಿಶ್ಚಿಯನ್ ಮಿನಿಸ್ಟ್ರಿ (D.Th.)
ಮೂರು ವರ್ಷದ ಬ್ಯಾಚುಲರ್ ಇನ್ ಥಿಯಾಲಜಿ ಮತ್ತು ಕ್ರಿಶ್ಚಿಯನ್ ಮಿನಿಸ್ಟ್ರಿ (B.Th.)

ತರಗತಿಗಳು ವಾರದ ಪ್ರತಿದಿನ ಸೋಮವಾರದಿಂದ ಶುಕ್ರವಾರ ಬೆಳಿಗ್ಗೆ 9 ರಿಂದ ಮಧ್ಯಾಹ್ನ 1ರವರೆಗೆ ಜರುಗುತ್ತದೆ. ದಿನದ ವಿದ್ಯಾರ್ಥಿಗಳು, ಕೆಲಸ ಮಾಡುವ ವೃತ್ತಿಪರರು ಮತ್ತು ಮನೆಯಲ್ಲಿ ಇರುವವರು ಇಂತಹ ತರಗತಿಗಳಿಗೆ ಹಾಜರಾಗಬಹುದು ಮತ್ತು ಮಧ್ಯಾಹ್ನ 1 ರ ನಂತರ ಅವರ ಕೆಲಸಗಳನ್ನು ಮುಂದುವರೆಸಬಹುದು.

ವಸತಿನಿಲಯ ಇಚ್ಚಿಸುವಂತಹ ವಿದ್ಯಾರ್ಥಿ / ವಿದ್ಯಾರ್ಥಿನಿಯರುಗಳಿಗೆ ಪ್ರತ್ಯೇಕ ವಸತಿ ವ್ಯವಸ್ಥೆ ದೊರೆಯುತ್ತದೆ. ವಿದ್ಯಾರ್ಥಿಗಳು ಸೇವಾಕಾರ್ಯಗಳು ವಿಶೇಷ ಸಮಾವೇಶಗಳು ಮಧ್ಯಾಹ್ನದ ಅವಧಿಗಳಲ್ಲಿ ಪ್ರಾರ್ಥನೆ ಮತ್ತು ಆರಾಧನೆ ಸಮಯದಲ್ಲಿ ಪ್ರತಿವಾರದ ದಿನ ಮಧ್ಯಾಹ್ನ 2 ರಿಂದ 5ರವರೆಗೆ ಭಾಗವಹಿಸಬೇಕು. ಮಧ್ಯಾಹ್ನದ ತರಗತಿಗಳು ದಿನದ ವಿದ್ಯಾರ್ಥಿಗಳಿಗೆ (ವಸತಿ ಬಯಸದ) ಐಚ್ಛಿಕ ವಿಷಯವಾಗಿದೆ. ಎಲ್ಲಾ ವಿದ್ಯಾರ್ಥಿಗಳು ವಾರಾತ್ಯಂದ ದಿನದಲ್ಲಿ ಒಂದು ಅಥವಾ ಅನೇಕ ಸ್ಥಳೀಯ ಸಭೆಗಳಲ್ಲಿ ಸೇವೆ ಮಾಡಲು ಪ್ರೋತ್ಸಾಹಿಸಲಾಗುತ್ತದೆ.

ಸತ್ಯವೇದ ಶಾಲೆ, ಕೊಡಲ್ಪಟ್ಟಂತಹ ವಿವಿಧ ಕಾರ್ಯಕ್ರಮಗಳು, ಕಲಿಕಾ ವಿಷಯಾಂಶಗಳು ಮತ್ತು ಅರ್ಜಿಯನ್ನು ಡೌನ್‌ಲೋಡ್ ಮಾಡಲು **apcwo.org/biblecollege** ಅನ್ನು ಸಂಪರ್ಕಿಸಿರಿ.

APC-BC is accredited by the
Nations Association for Theological
Accreditation (NATA).

ನಾನು ಮತ್ತು ನೀವು ದೇವರ ''ಸ್ವಂತ ವಿಶೇಷ ಜನರು'' ಆಗಿದ್ದೇವೆ. ನೀವು ಕ್ರೈಸ್ತರಾಗಿದ್ದರೆ ಒಬ್ಬ ವಿಶ್ವಾಸಿಯಾಗಿದ್ದರೆ ನೀವು ಅರ್ಹತೆಯುಳ್ಳವರು! ನಾವುಗಳು ಆರಿಸಿಕೊಂಡ ಜನಾಂಗವೂ, ರಾಜವಂಶಸ್ಥರೂ, ಪವಿತ್ರವಾದ ದೇಶದವರೂ ಆತನ ಸ್ವಂತ ವಿಶೇಷವಾದ ಜನರು ಎಂಬುದಾಗಿ ಸತ್ಯವೇದವು ವಿವರಿಸುತ್ತದೆ. ಯಾಕೆಂದರೆ ನಮ್ಮನ್ನು ಕತ್ತಲೆಯೊಳಗಿಂದ ಅದ್ಭುತಕರವಾದ ಬೆಳಕಿನೆಡೆಗೆ ಕರೆದಾತನ ಗುಣಾತಿಶಯಗಳನ್ನು ಮತ್ತು ಮಹತ್ತತೆಗಳನ್ನು ಶ್ರೇಷ್ಟತೆಗಳನ್ನು ಮತ್ತು ಸ್ತೋತ್ರಗಳನ್ನು ಸಾರುವುದಕ್ಕಾಗಿ ಘೋಷಿಸುವುದಕ್ಕಾಗಿ ಮತ್ತು ಪ್ರಕಟಿಸುದಕ್ಕಾಗಿಯೇ ಆಗಿದೆ.

ದೇವರನ್ನು ಉತ್ತಮವಾಗಿ ತೋರಿಸಲು ನಾನು ಮತ್ತು ನೀವುಗಳು ಈ ಭೂಲೋಕದಲ್ಲಿ ಇದ್ದೇವೆ.

ನಾವು ವಿಭಿನ್ನರು!

ಆಶಿಷ್ ರಾಯ್‌ಚೂರ್

**All Peoples Church & World Outreach**
# 319, 2nd Floor, 7th Main, HRBR Layout,
2nd Block, Kalyan Nagar, Bangalore 560 043
Karnataka, INDIA

Phone: +91-80-25452617
Email: contact@apcwo.org
Website: apcwo.org